CC-O. In Public Domain. Digitized by eGangotri

ಓದಿ
ಮನನ ಮಾಡಿ
ಬೇರೆಯವರಿಗೆ ಹೇಳಿ
ಪ್ರಚಾರ ಮಾಡಿ



ಶ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ

ಅವಶ್ಯ ಅನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಂ

"ಅಧ್ಯಾಪನಂ ಬ್ರಹ್ಮಯಜ್ಞಸ್ಯ ತರ್ಪಣಂ ।
ಹೋಮೋ ದೈವೋ ಬಲೊಭೂರ್ತತೋ ನೃಯಜ್ಞೋ ತಿಥಿಪೂಜನಂ ॥"

1. **'ಬ್ರಹ್ಮಯಜ್ಞ'** : 'ಅಧ್ಯಾಪನ', 'ಸ್ವಾಧ್ಯಾಯ', 'ಬ್ರಹ್ಮಯಜ್ಞ'

2. **'ದೇವಯಜ್ಞ'** : ಯಾಗಾದಿಗಳು ವೈಶ್ವದೇವ ಹೋಮಾದಿಗಳ ಆಚರಣೆ.

3. **'ಪಿತೃಯಜ್ಞ'** : ಶ್ರಾದ್ಧಾದಿ, ತರ್ಪಣಗಳ ವಿಧಿವಿಧಾನಗಳು.

4. **'ಭೂತಯಜ್ಞ'** : ಕಾಗೆ–ನಾಯಿ–ಪಶು–ಪಕ್ಷಿಗಳಿಗೆ ಅನ್ನ ನೀಡುವುದು.

5. **'ಮನುಷ್ಯಯಜ್ಞ'** : ಅತಿಥಿ ಸತ್ಕಾರ ಮಾಡುವುದು, ಆಶ್ರಿತ ಸೇವಕ–ಪಾಲಕರಲ್ಲೂ ಕರುಣೆ.

ಔಷಧಿಗಳಿಂದ ಪರಿಹರಿಸಲು ಸಾಧ್ಯವಾಗದ ರೋಗಗಳನ್ನು ಕೂಡ ಯಜ್ಞಕರ್ಮಗಳಿಂದ ಪರಿಹರಿಸಿಕೊಳ್ಳಬಹುದಾಗಿದೆ.

"ಯಜ್ಞಾತ್ ಸೃಷ್ಟಿಃ ಪ್ರಜಾಯಂತೆ ಅನ್ನಾನಿವಿವಿಧಾನಿಚ ।
ತೃಣಾನ್ನೌಷಧಾನ್ಯಥ–ಚ ಫಲಾನಿ. ವಿವಿಧಾನಿಚ ।
ಜೀವಾನಾಂ ಜೀವನಾರ್ಥಾಯ ಯಜ್ಞಃ
ಸಂಕ್ರಿಯತಾಂಬುಧೈ ॥"– ವಸಿಷ್ಠರು

1. ಅಯಂ ಯಜ್ಞೋ ಭುವನಸ್ಯ ನಾಭಿಃ ಋ. [1/164–35]

2. **'ಅಗ್ನಿಸ್ತು ವಿಶ್ವವಸ್ತಮಂ ತುವಿಬ್ರಹ್ಮಾಣಮುತ್ತಮಮ್ ।**
ಅತೂರ್ತಂ ಶ್ರಾವಯತ್ಪತಿಂ ಪುತ್ರ್ಂ ದ್ದಾಟ ದಾಶುಶೇ ॥' ಋ. [5/25.5]
ಯಜ್ಞದ ಅಗ್ನಿಗೆ ಹವಿರ್‌ದ್ರವ್ಯ ಪ್ರಧಾನ ಮಾಡುವವರು ಜ್ಞಾನೀ–ವಿಜಯೀ ಮತ್ತು ಶ್ರೇಷ್ಠ ವಾಗ್ಮಿಗಳಾಗುತ್ತಾರೆ. ಅವರು ಸರ್ವಗುಣಸಂಪನ್ನ ಪುತ್ರರನ್ನು ಪಡೆಯುತ್ತಾರೆ.

3. 'ಯಾವಾತನು ಶ್ರದ್ಧಾಭಕ್ತಿಯಿಂದ ಉತ್ತಮ ಸಮಿತ್ತುಗಳನ್ನು 'ಯಜ್ಞ' ದಲ್ಲಿ ಅರ್ಪಿಸುತ್ತಾನೋ, ಯಾವಾತನು ವೈದಿಕ ಮಂತ್ರದಿಂದ ಭಗವಂತನ ಉಪಾಸನೆ ಮಾಡುತ್ತಾನೋ ಅಂತಹವರಿಗೆ ಧನ–ಐಶ್ವರ್ಯ–ತೇಜಸ್ಸು ಪ್ರಾಪ್ತವಾಗುತ್ತದೆ. ಋ. [6/5.5]

4. 'ತಮೀಡತ ಪ್ರಥಮಂ ಯಜ್ಞಸಾಧಂ' ಋ. [1/96.3]
ಭಗವಂತನ ಕೃಪೆ ಯಜ್ಞಫಲದಿಂದ ಪ್ರಾಪ್ತವಾಗುತ್ತದೆ.

Sri Vidyaranya Books Centre, Srirangapatna

CC-0. Mumukshu Bhawan Varanasi Collection. Digitized by eGangotri

5. 'ಯಜ್ಞ ಇಂದ್ರಮವರ್ಧಯತ್' ಋ. [8/14/5]
ಯಜ್ಞದಿಂದಲೇ ಇಂದ್ರನಿಗೆ ಸರ್ವವೂ ಸಮೃದ್ಧಿಯಾಗಿ ಪ್ರಾಪ್ತವಾಗುವುದು.

6. ಯತ್ಕಾಮಾಸ್ತೆ 'ಜುಹುಮಸ್ತನ್ನೋ ಅಸ್ತು' ಋ. [10/120/10]
ಹವನ-ಹೋಮಗಳಿಂದ ಅಭೀಷ್ಟಿತ ಕಾಮನೆಗಳೆಲ್ಲಾ ಪೂರ್ಣವಾಗುತ್ತವೆ.

7. ಯಜ್ಞ ಸಮಸ್ತ ಭುವನಗಳ ಕೇಂದ್ರ ಋ. [1/164.35]

8. ಯಜ್ಞ ಸ್ವಯಂ ಪವಿತ್ರ ಮತ್ತು ಬೇರೆಯವರನ್ನೂ ಪವಿತ್ರೀಕರಿಸುತ್ತದೆ.
ಋ. [1/177.4

9. "ಸಯಜ್ಞೇವ ವನವದ್‌ದೇವ ಮರ್ತಾನ್" ಯಜ್ಞದ ಮೂಲಕ ಭಗವಂತನು ಮಾನವನನ್ನು ಪರಮ ಭಕ್ತನನ್ನಾಗಿ ಪರಿವರ್ತಿಸುತ್ತಾನೆ. ಋ. [5/3.5]

10. ಯಜ್ಞವೇ ಪ್ರಪ್ರಥಮ ಮತ್ತು ಪ್ರಮುಖ ಧರ್ಮವಾಗಿದೆ. ಋ.[10/90.16]

11. ಹವನ ಹೋಮಾದಿಗಳಿಂದ ಅಭೀಷ್ಟಿತ, ಆಶೆ, ಆಕಾಂಕ್ಷೆಗಳೆಲ್ಲಾ ಸಿದ್ಧಿಸುವವು
ಋ.[10/101.2]

12. ಯಜ್ಞದಿಂದ ದೇಶ ಮತ್ತು ಸಮಾಜದ ಸಂಚಾಲನೆಯೂ, ಸಂರಕ್ಷಣೆಯೂ ಆಗುತ್ತದೆ. ಋ.[2/38.1]

13. ಬ್ರಹ್ಮಾಣ್ಯಯಮಿಂದ್ರ ಸೋಮಃ ಋ.[1/172.4]

14. ಯಜ್ಞ ಮತ್ತು ಯಜ್ಞೇಶ್ವರನನ್ನು ಆರಾಧಿಸುವುದರಿಂದ ಮಾನವನ ಮನಸ್ಸು-ವಾಣಿ-ಬುದ್ಧಿ ಉನ್ನತಿ ಹೊಂದುತ್ತವೆ. ಯ.[33/16]

15. "ಆಯುರ್ಯಜ್ಞೇನ ಕಲ್ಪತಾಮ್" ಯ.[17/26]
ಯಜ್ಞದ ಮೂಲಕ ಮಹಾಯಜ್ಞ ಪ್ರಾಪ್ತವಾಗಲಿ

16. "ಯಜ್ಞೋಯಜ್ಞೇನ ಕಲ್ಪತಾಮ್" ಯ.[18/26]
ಯಜ್ಞದ ಮೂಲಕ ಮಹಾಯಜ್ಞ ಪ್ರಾಪ್ತವಾಗಲಿ.

17. "ಯಜ್ಞೋ ದೇವೇಷು ಕಲ್ಪತಾಮ್ " ಯ.[19/45]
ದೇವತೆಗಳನ್ನು ತೃಪ್ತಿಪಡಿಸುವಲ್ಲಿ "ಯಜ್ಞ"ಸಮರ್ಥವಾಗಲಿ

18. "ಜಗತ್ತು ಹೊರಬಂದುದು ಯಜ್ಞದಿಂದಲೇ " ಯ.[20/84]

19. "ಯಜ್ಞೋ ಭುವನಸ್ಯನಾಭಿಃ" ಯ. [23/62]
ಯಜ್ಞವೇ ಸಮಸ್ತ ವಿಶ್ವದ ಕೇಂದ್ರಸ್ಥಾನ.

20. "ಯಜ್ಞಂ ನೊದೇವೀರಮೃತೇಷುಧತ್ತ " ಯ.[29/8]
ಭಾರತೀ-ಸರಸ್ವತಿ ಮತ್ತು ಇಡಾ ಎಂಬ ಹೆಸರಿನ ಮೂರು ದೇವತೆಗಳೇ ನಮ್ಮ ಯಜ್ಞವನ್ನು ದೇವತೆಗಳಲ್ಲಿ ಸ್ಥಾಪಿಸಿರಿ.

Sri Vidyabharathi Book Centre, Sringeri

21. "ಯಜ್ಞೇನ ಯಜ್ಞಮಯಜಂತ ದೇವಾಃ " ಯ [31/16]

CC-O. In Public Domain. Digitized by eGangotri
ದೇವತೆಗಳು ಯಜ್ಞದ ಮೂಲಕ ಯಜ್ಞಪುರುಷ ಭಗವಂತನನ್ನು ಸ್ತುತಿಸಿದರು.

22. "ಶನ್ನೋಭವತು ಭುವನಸ್ಯ ಯಸ್ಪತಿ" ಯ [36/2]
ಸಮಸ್ತ ವಿಶ್ವದ ಅಧಿಪತಿ 'ಯಜ್ಞ' ದಿಂದ ನಮಗೆ ಸುಖ ಪ್ರಾಪ್ತಿಯಾಗಲಿ.

23. "ತಾಮೇವಂ ವಿದ್ವಾನಮೃತ ಇಹಭವತಿ/ನಾನ್ಯಃ ಪಂಥಾ ಅಯನಾಯವಿದ್ಯತೆ
ಪರಮಪದಕ್ಕೆ ಮತ್ತೊಂದು ದಾರಿ ಯಾವುದೂ ಇಲ್ಲ. ಅಮೃತತ್ವಕ್ಕೆ ಯಜ್ಞ
ಒಂದೇ ದಾರಿ" ಯ.

24. "ಯಜ್ಞೋ ವೈ ವಿಷ್ಣುಃ" [ಕೃಷ್ಣ ಯಜುರ್ವೇದ 3/5.2]

25. "ಯತ್ಪುರುಷೇಣ ಹವಿಷಾ ದೇವಾ ಯಜ್ಞಮತಸ್ವತ" ಯ.

26. "ತಂ ಯಜ್ಞಂ ಬರ್ಹಿಶಿ ಪ್ರೋಕ್ಷನ್ ಪುರುಷಂ ಜಾಯಮಗ್ರತಃ ।
ತೇನ ದೇವಾ ಅಯಜಂತ ಸಾರ್ಧಯಾ ಋಷಯಶ್ಚಯೆ ॥"
[ಶುಕ್ಲ ಯಜುರ್ವೇದ 31/6]

ಸರ್ವಪ್ರಥಮ ಉತ್ಪನ್ನ ಭಗವತ್ ಸ್ವರೂಪ ಆ ಯಜ್ಞದ ಮೂಲಕ ಇಂದ್ರಾದಿ ಸೃಷ್ಟಿಸಾಧನ ಯೋಗ್ಯ ಪ್ರಜಾಪತಿ ಮುಂತಾದ ಸಾಧ್ಯರು ಮತ್ತು ಮಂತ್ರ ದ್ರಷ್ಟಾರಾದ ಋಷಿಗಳು ಯಜ್ಞ ಭಗವಂತನನ್ನು ಪ್ರಾರ್ಥಿಸಿದರು.

27. "ತಸ್ಮಾದ್ಯಜ್ಞಾತ್ ಸರ್ವಹುತ ಋಚಃ ಸಾಮಾನಿಜಜ್ಞಿರೆ ।
ಛಂದಾಸಿ ಜಜ್ಞಿರೆ ತಸ್ಮಾದ್ಯಜುಸ್ತಸ್ಮಾದಜಾಯತ ।" [ಶುಕ್ಲ ಯಜುರ್ವೇದ 31/7]
ಎಲ್ಲವನ್ನು ಆಹುತಿಯಾಗುಳ್ಳ ಯಜ್ಞದಿಂದಲೇ ಋಗ್ವೇದದ ಮಂತ್ರಗಳೂ
ಸಾಮವೇದದ ಗಾನಗಳೂ, ಛಂದಸ್ಸುಗಳೂ, ಯಜುರ್ವೇದವೂ
ಅದರಿಂದಲೇ ಸೃಷ್ಟಿ ಆಯಿತು.

28. ಈಶ್ವರನ ಒಂದು ಹೆಸರು 'ಯಜ್ಞ'ವೆಂದೇ ಕರೆಯಲಾಗಿದೆ.

29. 'ಯಜ್ಞಂ ವಷ್ಟು ಧಿಯಾ ವಸುಃ' [ಶು. ಯ. 20/84]
ಯಜ್ಞದಿಂದ ಐಶ್ವರ್ಯ ಪ್ರಾಪ್ತಿಯಾಗುವುದು.

30. 'ಯಜ್ಞ ತ್ರಿಲೋಕ ವ್ಯಾಪ್ತಿಯಾದುದು' [ಶು. ಯ. 4/6]

31. ಭಗವಂತನೇ ಯಜ್ಞದಲ್ಲಿ ಸದಾ ತೊಡಗಿಸಿರುವಾಗ ಮಾನವನೂ ಕೂಡ
ಯಜ್ಞದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. [ಶು. ಯ. 21/47]

32. 'ಯಜ್ಞ' ದಿಂದಲೇ ಮೊಸರು–ತುಪ್ಪ ಎಲ್ಲಾ ಪ್ರಾಣಿಗಳೂ ಸೃಷ್ಟಿಯಾದವು.

33. ಯಜ್ಞ ಹೀನ ಮಾನವನು ದುಃಖ ದೌರ್ಭಾಗ್ಯಗಳಿಂದ ಪೀಡಿತನಾಗುತ್ತಾನೆ.
[ಶು. ಯ. 12/62]

34. ಯಜ್ಞೋಪಿ ತಸ್ಮೈ ಜನತಾಯೈ ಕಲ್ಪತಾಮ್ :
ಯಜ್ಞವಿರುವುದು ಜನತೆಯ ಒಳಿತಿಗಾಗಿಯೇ. ಇದ್ದು ಜನತೆಯ

Sri Vidyabharathi Book Centre, Sringeri

CC-0. In Public Domain. Digitized by eGangotri

ಕಲ್ಯಾಣಕ್ಕಾಗಿಯೇ ಸೃಷ್ಟಿಯಾಗಿದೆ. [ಶು.ಯ. 2/1.7]

35. 'ಯಜ್ಞ ಇಂದ್ರಮವರ್ಧಯತ್ [ಸಾಮವೇದ 2/1.7]

36. 'ಜ್ಯೋತಿರ್ಯಜ್ಞಸ್ಯ ಪವತೆ' [ಸಾ 7/1.1]

37. ಯಜ್ಞಜ್ಯೋತಿಯು ಮನುಷ್ಯನನ್ನು ಪವಿತ್ರೀಕರಿಸುತ್ತದೆ. [ಸಾ 7/1.1]

38. 'ಯಜ್ಞದಿಂದ ಅನೇಕ ಪ್ರಕಾರದ ಐಶ್ವರ್ಯ ಪ್ರಾಪ್ತಿಯಾಗುವುದು' [ಸಾ 2/8.5]

39. 'ಯಜ್ಞಾಃ ಪೃಥವೀ ದಾರಯಂತಿ' [ಅಥರ್ವವೇದ 6/10–14]
ಯಜ್ಞವೇ ಈ ಪೃಥ್ವಿಯನ್ನು ಧಾರಣೆ ಮಾಡಿದೆ.

40. 'ಯಜ್ಞೋ ವಿಶ್ವಸ್ಯ ಭುವನಸ್ಯ ನಾಭಿಃ' [ಅ 6/10–14]

41. 'ಅಯಜ್ಞೀಯೋ ಹತವರ್ಚಾ ಭವತಿ' [ಅ, 12/2.37]

42. 'ಯಜ್ಞ ನಿರತ ಮಾನವನು 'ಪರಮಧಾಮ'ದಲ್ಲಿ ಪ್ರತಿಷ್ಠಿತನಾಗುತ್ತಾನೆ. ಇದು ಸತ್ಯಸ್ಯ ಸತ್ಯ. [ಅ6/123.3]

43. 'ಯಜ್ಞ ಸಮಸ್ತ ಬ್ರಹ್ಮಾಂಡವನ್ನೇ ಬಂಧಿಸುವ ನಾಭಿಸ್ಥಾನ' [ಅ, 9/10.14]

44. ಯಜ್ಞ ನಿರತ ಮಾನವನಿಗೆ ಸ್ವರ್ಗ ಪ್ರಾಪ್ತಿಯಾಗುವುದು. [ಅ, 18/41.2]

45. ಅಹಂ ಕ್ರತುರಹಂ ಯಜ್ಞಃ [ಭಗವದ್ಗೀತೆ 9.16]
ಶ್ರೌತ ಕರ್ಮವೂ ಯಜ್ಞವೂ ನಾನೇ ಆಗಿದ್ದೇನೆ.

46. 'ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್' [ಭ.ಗೀ 3/15]

47. 'ಅಹಂ ಹಿ' ಸರ್ವ ಯಜ್ಞಾನಾಂ ಭೋಕ್ತಾಚ ಪ್ರಭುರೇವ ಚ [ಭ.ಗೀ 9/24]
ಭಗವಂತನೇ ಸಮಸ್ತ ಯಜ್ಞಾದಿ ಕರ್ಮಗಳ ಭೋಕ್ತೃವು

48. 'ಯಜ್ಞ ದಾನ ತಪಃ ಕರ್ಮನ ತ್ಯಾಜ್ಯಂ ಕಾರ್ಯ ಮೇವತತ್ ।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ॥ [ಭ.ಗೀ 18/5]
ಯಜ್ಞ–ದಾನ–ತಪರೂಪವಾದ ಕರ್ಮ ತ್ಯಜಿಸಲು ಯೋಗ್ಯವಾದುದಲ್ಲ. ಈ ಮೂರು ಬುದ್ಧಿವಂತರಾದ ಮನುಷ್ಯರನ್ನು ಪವಿತ್ರಗೊಳಿಸುವುದು.

49. 'ಯಜ್ಞಾರ್ಥತ್ಕರ್ಮಣೋನ್ಯತ್ರ ಲೋಕೋಯಂ ಕರ್ಮಬಂಧನಃ' [ಭ.ಗೀ 3/9]
ಯಜ್ಞ ನಿಮಿತ್ತ ಮಾಡಲ್ಪಡುವ ಕರ್ಮಗಳಲ್ಲದೆ ಬೇರೆ ಕರ್ಮಗಳೆಲ್ಲಾ ಲೋಕ ಬಂಧನವೇ ಸರಿ.

50. **ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।**
ಅನೇನ ಪ್ರಸವಿಷ್ಯ ಧ್ವಮೇಷ ವೊಸ್ತಿಷ್ಟ ಕಾಮಧುಕ್ ॥ [ಭ.ಗೀ 3/10]
ಪ್ರಜಾಪತಿ ಬ್ರಹ್ಮನು ಕಲ್ಪದ ಆದಿಯಲ್ಲಿ ಯಜ್ಞ ಸಹಿತವಾಗಿಯೇ ಪ್ರಜೆಗಳನ್ನು ರಚಿಸಿ, ಅವರಿಗೆ ಹೇಳಿದನು, 'ನೀವು ಈ ಯಜ್ಞವಾಡಿ ವೃದ್ಧಿಯನ್ನು ಪಡೆಯಿರಿ ಮತ್ತು ಈ ಯಜ್ಞವು ನಿಮಗೆ ಇಚ್ಛಿಸಿದ ಫಲಗಳನ್ನು ಪ್ರಧಾನ ಮಾಡುವುದು.

Sri Vidyabharathi Book Centre, Shirgeri

CC-O. In Public Domain. Digitized by eGangotri

51. ಯಜ್ಞದ ಮೂಲಕ ತೃಪ್ತರಾದ ದೇವತೆಗಳು ಇಚ್ಛಿಸಿದ ಭೋಗಗಳೆಲ್ಲವನ್ನು ನಿಶ್ಚಿತವಾಗಿಯೂ ಕೊಡುವರು.

52. ಸರ್ವ ವ್ಯಾಪಿಯೂ, ಪರಮ ಅಕ್ಷರನೂ ಆದ ಪರಮಾತ್ಮನು ಸದಾ ಯಜ್ಞದಲ್ಲಿ ಪ್ರತಿಷ್ಠಿತನಾಗಿದ್ದಾನೆ.

53. 'ಯಜ್ಞಯಾ–ಚರಿತಃ ಕರ್ಮ ಸಮಗ್ರಂ ಪ್ರವಿಲೀಯತೇ' [ಭ.ಗೀ 4/23]
ಯಾವ ಮನುಷ್ಯನಿಗೆ ಶಾಸ್ತ್ರ ದೃಷ್ಟಿಯಿಂದ ವಿಹಿತವಾದ ಯಾವ ಕರ್ತವ್ಯವಿದೆಯೋ ಅದೇ ಅವನಿಗೆ 'ಯಜ್ಞ'ವಾಗಿದೆ.

54. 'ನಾಯಂ ಲೋಕೋಸ್ತ್ಯ ಯಜ್ಞಸ್ಯ ಕುತೋನ್ಯಃ ಕುರುಸತ್ತಮ' [ಭ.ಗೀ. 4/31]
ಯಜ್ಞವಿಹೀನನಿಗೆ ಈ ಮೃತ್ಯುಲೋಕವೇ ಸುಖದಾಯಕವಾಗದಿರುವಾಗ ಅವನಿಗೆ ಪರಲೋಕವು ಹೇಗೆ ಸುಖದಾಯಕವಾಗಬಲ್ಲದು.

55. ಸತ್ಕಾರ್ಯಗಳೆಲ್ಲಾ ಯಜ್ಞವೇ.

56 'ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ– ಪ್ರತಿಷ್ಠಿತಮ್'
ಬಹ್ಮವು ಯಾವಾಗಲೂ ಯಜ್ಞದಲ್ಲಿಯೇ ನೆಲಸಿದೆ.

57. ಭಗವಂತನೇಸಮಸ್ತ ಯಜ್ಞ ಮತ್ತು ತಪಗಳ ಭೋಕ್ತಾರ [ಭ.ಗೀ. 9/24]

58. 'ಭೋಕ್ತಾರಂ ಯಜ್ಞ ತಪಸಾಂ ಸರ್ವಲೋಕ ಮಹೇಶ್ವರಂ, [ಭ.ಗೀ. 5/29]
ನನ್ನ ಭಕ್ತನು ನನ್ನನ್ನು ಎಲ್ಲಾ ಯಜ್ಞ ಮತ್ತು ತಪಸ್ಸುಗಳಿಂದ ಭೋಗಿಸುವನು

59. 'ಯಜ್ಞಾದ್ಭವತಿ ಪರ್ಜನ್ಯ ಯಜ್ಞಃ ಕರ್ಮಸಮುದ್ಭವಃ'
ಯಜ್ಞದಿಂದ ಮಳೆ ಯಾಗುವುದು. ಯಜ್ಞವು ಕರ್ಮದಿಂದಲೇ ಆಗುವುದು.
[ಭ.ಗೀ. 3/14]

60. ಯಜ್ಞ ನಿಮಿತ್ತ ಮಾಡಲ್ಪಡುವ ಕರ್ಮವು ಮನುಷ್ಯನಿಗೆ ಬಂಧನಕಾರಕಗಳಾಗುವುದಿಲ್ಲ. ಇಂತಹ ಕರ್ಮ ಮಾಡುವವನ ಪೂರ್ವ ಸಂಚಿತ ಸಮಸ್ತ ಪಾಪ ಪುಣ್ಯಗಳೂ ಸಹಾವಲೀನವಾಗಿ ಹೋಗುತ್ತವೆ. [ಭ.ಗೀ. 4/23].

61. ಯಜ್ಞ ಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವ ಕಿಲ್ಬಿಷೈಃ [ಭ.ಗೀ. 3/13]
ಯಜ್ಞದ ಉಳಿದ ಅನ್ನವನ್ನು ಸೇವಿಸುವ ಶ್ರೇಷ್ಠ ಪುರುಷರು ಎಲ್ಲಾ ಪಾಪಗಳಿಂದ ಮುಕ್ತರಾಗುತ್ತಾರೆ.

62. ಯಜ್ಞ ಮಾಡದಿದ್ರೆ ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಸುನಾಮಿ ಮುಂತಾದ ವಿಪ್ಲವಗಳಿಂದ ತತ್ತರಿಸಿ ಹೋಗಬೇಕಾಗುತ್ತದೆ !

63. 'ಯಜ್ಞೋ ಹಿ ಭಗವಾನ್ ವಿಷ್ಣು' [ವಿಷ್ಣು ಧರ್ಮೋತ್ತರ. ಪುರಾಣ, 162/2]

64. 'ಯಜ್ಞೈರನೇ ಕೈ ದೈವತ್ತ ಮವಾಪ್ಯ ಇಂದ್ರೇಣ ಭುಜ್ಯತೇ, [ಪದ್ಮ ಪು, 13/368]

Sri Vidyabharathi Book Centre, Sringeri

CC-O. In Public Domain. Digitized by eGangotri
ಅನೇಕ ಯಜ್ಞಗಳನ್ನು ಮಾಡುವುದರಿಂದ ದೈವಕ್ಕೆ ಪ್ರೀತಿಯಾಗುವುದಲ್ಲದೆ, ಇಂದ್ರನೊಂದಿಗೆ ದಿವ್ಯ ಭೋಗಗಳನ್ನನುಭವಿಸುತ್ತೇವೆ.

65. 'ಯಜ್ಞೇನ ದೇವಾನಾಪ್ನೋತಿ' [ವಾಯುಪುರಾಣ, 57/117]
66. 'ಯಜ್ಞಭಾಗ ಭುಜಃ ಸರ್ವೆ' [ಪದ್ಮ ಪು, 7/67]
67. 'ಯಜ್ಞೋ ಯಜ್ಞಪತಿಃ ಸಾಕ್ಷಾತ್' [ಪದ್ಮ ಪು, 224/17]
68. ಯಜ್ಞೋಪಿ ತಸ್ಮೈ ಜನತಾಯೈ ಕಲ್ಪತೆ' [ಐತರೇಯ ಬ್ರಾಹ್ಮಣ 1/2.3]
69. 'ನಾರಾಯಣಪರಾ ಯಜ್ಞಾಃ [ಬ್ರಹ್ಮ ಪು, 60/26]
70. 'ವೇದ ಯಜ್ಞಮಯಂ ರೂಪಿಮಾಶ್ಚಿತ್ಯ ಜಗತಃ ಸ್ಥಿತೌ ।
ಸ್ಥಿತಃ ಸ್ಥಿರಾತ್ಮಾ ಸರ್ವಾತ್ಮಾ ಪರಮಾತ್ಮಾ ಪ್ರಜಾಪತಿಃ ॥' [ಪದ್ಮ ಪು, 3/30]
71. ಯಜ್ಞಸಿದ್ಧಿಗಾಗಿಯೇ ಋಗ್ವೇದ, ಯಜುರ್ವೇದ, ಸಾಮವೇದಗಳ ನಿರ್ಮಾಣವಾಗಲ್ಪಟ್ಟಿದೆ. [ಬ್ರಹ್ಮ ಪು, 1/49]
72. 'ಸಮಸ್ತ ಯಜ್ಞಗಳ 'ಪ್ರಭು' ಈಶ್ವರನೇ [ಬ್ರಹ್ಮ ಪು, 34/40]
73 'ಸಮಸ್ತ ಯಜ್ಞಗಳ 'ಪ್ರಭು' ನಾರಾಯಣ. [ಬ್ರಹ್ಮ ಪು, 60/76]
74. 'ಯಜ್ಞಗಳು ನಡೆಯದೇ ಹೋದರೆ 'ಕಲಿಯುಗದ ಬಲ' ವೃದ್ಧಿಯಾಗುತ್ತಾ ಹೋಗುತ್ತದೆ. ಇದನ್ನು ತಿಳಿಯಬೇಕು. [ಬ್ರ.ಪು. 229/47]
75. 'ಕಲಶ ವಸ್ತ್ರಗಳಿಲ್ಲದೆ ಯಜ್ಞ ಪೂರ್ಣವಾಗಲಾರದು. [ಬ್ರ.ಪು. 220/139]
76. 'ಯಜ್ಞವೇ 'ಧರ್ಮಮಂತ್ರಾತ್ಮಕ'ವಾಗಿರುವುದು [ವಾಯು ಪುರಾಣ 57/117]
77. 'ಯಜ್ಞಗಳ ನಾಶದಿಂದ ದೇವರೆಗಳ ನಾಶ. ಪರಿಣಾಮ ಎಲ್ಲವೂ ನಷ್ಟವಾಗುವುದು. [ವಾ.ಪು. 60/6]
78. 'ಸರ್ವಾರಿಷ್ಟ ಸಿದ್ಧಿಗಾಗಿ ಯಜ್ಞವೇ ಮೂಲ ಆಧಾರ. ನಿಮ್ಮ ಇಷ್ಟಾರ್ಥಗಳನ್ನೆಲ್ಲಾ ಪರಿಪೂರ್ಣ ಮಾಡುವುದು. [ವಾ.ಪು. 60/7]
79. 'ವಾಣಿಜ್ಯ ವೃತ್ತಿಯಿಂದ ಜೀವನ ಜರುಗಿಸುವ ಬ್ರಾಹ್ಮಣನನ್ನು ಯಜ್ಞದಿಂದ ತ್ಯಜಿಸಬೇಕು. [ಸ್ಕಂದ ಪು. ಪ್ರಭಾಖಂಡ]
80. 'ಯಜ್ಞ ಮತ್ತು ಶ್ರಾದ್ಧಕ್ಕೆ ಪೂರ್ವಭಾವಿ ಆಮಂತ್ರಿಸಲ್ಪಟ್ಟ ಬ್ರಾಹ್ಮಣನನ್ನು ಯಾರು ತ್ಯಾಜ್ಯ ಮಾಡುತ್ತಾರೋ ಅವನು ಅಂತಹ ಪಾಪಾತ್ಮನು. [ಸ್ಕಂದ ಪು. ಪ್ರಭಾಖಂಡ]
81. 'ಯಜ್ಞದಲ್ಲಿ ಯಾವ ವ್ಯಕ್ತಿ ಮೌನವಾಗಿರುವನೋ ಅವನಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ. [ಸ್ಕಂದ ಪು. ಪ್ರಭಾಖಂಡ]
82. ಶ್ರಾವಣಮಾಸ ಯಜ್ಞಕ್ಕೆ ಪ್ರಶಸ್ತ. ಇದು ಜ್ಯೋತಿಶಾಸ್ತ್ರದ ಅಭಿಪ್ರಾಯ [ಸ್ಕಂದ ಪು. ಪ್ರಭಾಖಂಡ]

Sri Vidyabharathi Book Centre, Sringeri

CC-0. In Public Domain. Digitized by eGangotri

83. ಯಜ್ಞಾದಿಗಳಲ್ಲಿ ನಿತ್ಯ ಪೂರ್ಣಾಹುತಿ ಮಾಡಬೇಕು [ಬ್ರಹ್ಮ ಪುರಾಣ]

84. 'ಯಜ್ಞೇ ನಷ್ಟೆ ದೇವನಾಶಸ್ತತಃ ಸರ್ವಂ ಪ್ರಣಶ್ಯತಿ' [ವಾ.ಪು. 60/61]
ಯಜ್ಞ ಮಾಡದಿದ್ದರೆ ದೇವತೆಗಳ ನಾಶವಾಗುತ್ತದೆ. ದೇವತೆಗಳ ನಾಶದಿಂದ ಸಮಸ್ತ ಜಗತ್ತೇ ನಾಶವಾಗುತ್ತದೆ.

85. 'ಯಜ್ಞೇ' ವಿನಷ್ಟೆ ಸಕುಲಾಃ ಪ್ರಜಾಃ ಕ್ಷದ್ ಭಯಕಾತರಾಃ ।
ವೃಷ್ಟ ಚ ಬಾವಾನ್ಮಹದ್ ದುಃಖಂ ಪ್ರಾಪ್ಯ ನಷ್ಟಾಶ್ಚ ಕಾಶ್ಚನ ॥
[ಕಾಳಿಕಾ ಪುರಾಣ]
ಯಜ್ಞವಿಲ್ಲದೆ ಹೋದರೆ ಪ್ರಜೆಗಳು ಹಸಿವಿನಿಂದ ಪೀಡಿತರಾಗುತ್ತಾರೆ. ಮಳೆಯ ಅಭಾವದಿಂದಾಗಿ ಅನೇಕ ವಿಧದ ಕಷ್ಟ–ನಷ್ಟಗಳನ್ನು ಅನುಭವಿಸಬೇಕಾಗುತ್ತದೆ.

86. 'ಯಜ್ಞಾ ಭಾವಯ ದೇವಾನಾಮನ್ನಂ ಸರ್ವ ಕ್ಷಯಂ ಗತಮ್ ।
ಪರ್ಜನ್ಯಾಶ್ಚ ತತೋ ನಷ್ಟಾಸ್ತತೋ ವೃಷ್ಟಿರ್ನ ಚಾಭವತ ॥
ವೃಷ್ಟಚ ಭಾವೇತು ಲೋಕಾನಾಮಾ ಹಾರಾಃ ಕ್ಷೀಣತಾಂಗತಾ ।
ದುರ್ಭಿಕ್ಷವ್ಯಸನೋಪೇತೆ ಸರ್ವಲೋಕೆ ದ್ವಿಜೋತ್ತಮಾಃ ॥
[ಕಾಳಿಕಾ ಪುರಾಣ 20–112–113]
ದೇವತೆಗಳ ಉದ್ದಿಶ್ಯದಿಂದ ಯಜ್ಞ ನಡೆಯದಿದ್ದರೆ ಅನ್ನಕ್ಷಾಮ ಉಂಟಾಗುವುದು. ಮಳೆಯ ಮೋಡಗಳು ಕಾಣೆಯಾಗುವುವು. ಮಳೆಯುಂಟಾಗುವುದಿಲ್ಲ. ಮಳೆಯ ಅಭಾವದಿಂದಾಗಿ ಇಡೀ ಪ್ರಪಂಚ ದುರ್ಭಿಕ್ಷೆಗೆ ತುತ್ತಾಗುವುದು

87. ನಾಸ್ತಿ ವಿಷ್ಣೋಃ ಪರೋ ಮಖಃ [ಪದ್ಮಪುರಾಣ 71/311]

88. ಭೋಕ್ತಾ ಸ ಸರ್ವಯಜ್ಞಾನಾಂ ಶಂಕರಃ ಪರಮಾರ್ಥತಃ
[ಸೌರಪುರಾಣ 7/14]
ಭಗವಾನ್ ಶಂಕರನು ಸಮಸ್ತ ಯಜ್ಞದ ಒಡೆಯ (ಭೋಕ್ತಾ=ಅನುಭವಿಸುವವನು)

89. **ಅವಿಮುಕ್ತೆ ಯಜಂತೆತು ಮದ್ ಭಕ್ತಾಃ ಕೃತನಿಶ್ಚಯಾ ।**
ನ ತೇಷಾಂ ಪುನರಾವೃತ್ತಿಃ ಕಲ್ಪ ಕೋಟಿಶ ತೈರಪಿ ॥
[ಮತ್ಸ್ಯಪುರಾಣ 172/24]
ಯಾರು ದೃಢನಿಶ್ಚಯದಿಂದ ಮುಕ್ತಿಗಾಗಿ ಯಜ್ಞದ್ವಾರ 'ನನ್ನ' ಯಾಗ ಮಾಡುತ್ತಾರೋ ಅಂತಹವರಿಗೆ 100 ಕೋಟಿ ಕಲ್ಪದವರೆಗೂ ಪ್ರಪಂಚದಲ್ಲಿ ಪುನರಾವರ್ತಿ ಉಂಟಾಗುವುದಿಲ್ಲ. (ಕಲ್ಪ–ಬ್ರಹ್ಮನ ಒಂದು ಹಗಲು)

90. ಶುಭ ಲಕ್ಷಣಗಳಿಂದ ಸು–ಸಂಪನ್ನರಾದ, ಮಂತ್ರಗಳ ಪ್ರಯೋಗಗಳಂತಿರುವ–ಜಿತೇಂದ್ರಿಯ, ಕುಲೀನ, ಶೀಲವಂತರಾದ ಬ್ರಾಹ್ಮಣರನ್ನೇ ಯಜ್ಞಕ್ಕೆ ನಿಯುಕ್ತಿ

CC-O. In Public Domain. Digitized by eGangotri

ಮಾಡಿಕೊಳ್ಳಬೇಕೇ ವಿನಃ ವೇದ-ಮಂತ್ರಗಳನ್ನರಿಯದವರನ್ನು ಎಂದಿಗೂ ನಿಯುಕ್ತಿ ಮಾಡಿಕೊಳ್ಳಬಾರದು. ಫಲ ಪ್ರಾಪ್ತಿಯಾಗುವುದಿಲ್ಲ [ಪದ್ಮಪುರಾಣ]

91. ಪ್ರತ್ಯೇಕ ಪ್ರತಿಕುಂಡಗಳ ಹತ್ತಿರ ಕಳಸ,ಯಜ್ಞ ಸಾಮಗ್ರಿ, ನಿರ್ಮಲ ಆಸನ ಮತ್ತು ವಿಸ್ತೃತ ತಾಮ್ರ ಪಾತ್ರೆಗಳನ್ನೇ ಇಟ್ಟುಕೊಳ್ಳಬೇಕು.
[ತತ್ವ ಪುರಾಣ, ಸೃಷ್ಟಿಕಾಂಡ]

92. ಯಜ್ಞವೇ ಸಾಕ್ಷಾತ್ ಯಜ್ಞಪತಿಃ [ಪದ್ಮಪುರಾಣ, ಉತ್ತರಕಾಂಡ 202/8]

93. ವೇದಾಸ್ತು ಯಜ್ಞಾರ್ಥಮಭಿ ಪ್ರವೃತ್ತಾಃ [ವಿಷ್ಣು ಧರ್ಮೋತ್ತರ ಪುರಾಣ]

94. ನಾರಾಯಣ ಪರೋ ಯಜ್ಞಃ । ಅಗ್ನಿ ವೈ ಯಜ್ಞಃ ಇಂದ್ರೋವೈ ಯಜ್ಞಃ

95. ಯಜ್ಞೋಹಿ ದೇವಾನಾಂ ಮಹಃ [ಶತಪಥ ಬ್ರಾ. 1/5/1-11]
ಯಜ್ಞವೇ ದೇವತೆಗಳ ವಿಭೂತಿಯಾಗಿದೆ.

96. ಯಜ್ಞೋ ವಸುಃ [ಶತಪಥ ಬ್ರಾ. 1/7/1-9]
ಯಜ್ಞವೇ ಐಶ್ವರ್ಯವು

97. ಯಜ್ಞಾದ್ವೈ ಪ್ರಜಾಃ ಪ್ರಜಾಯಂತೆ [ಶತಪಥ ಬ್ರಾ. 1/9-25]
ಯಜ್ಞದಿಂದಲೇ ಸಂತಾನ ಉತ್ಪತ್ತಿ ಆಗುವುದು

98. ಯಜ್ಞೋ ವೈ ದೇವಾನಾಮಾತ್ಮಾ [ಶತಪಥ ಬ್ರಾ.9/3/217]
ಯಜ್ಞವೇ ದೇವತೆಗಳ ಆತ್ಮ

99. ಸರ್ವೇಶಾಂ ದೇವನಾಮಾತ್ಮಾ ಯದ್ ಯಜ್ಞಃ [ಶತಪಥ ಬ್ರಾ. 13/3.2.1]
ಯಜ್ಞ ಸಮಸ್ತ ದೇವತೆಗಳ ಆತ್ಮವಾಗಿದೆ.

100. ಯಜ್ಞೋ ಸರ್ವಾಣಿ ಭೂತಾನಿ ಭುನಕ್ತಿ [ಶತಪಥ ಬ್ರಾ. 9/4.1.20]
ಯಜ್ಞವೇ ಸಮಸ್ತ ಪ್ರಾಣಿಗಳನ್ನು ರಕ್ಷಿಸುವುದು

101. ಯಜ್ಞೋ ವೈ ವಿಷ್ಣುಃ [ಶತಪಥ ಬ್ರಾ.1/1/1.2]
ಯಜ್ಞವೇ ವಿಷ್ಣು

102. ಯಜ್ಞದಿಂದಲೇ ಯಜ್ಞ ನಿರ್ಮಾಣವಾಗುತ್ತದೆ. [ಶತಪಥ ಬ್ರಾ.1.1.2]

103. ಯಜ್ಞ ಅತ್ಯಂತ ಶ್ರೇಷ್ಠ ಕರ್ಮ [ಶತಪಥ ಬ್ರಾ.1-7-1-5]

104. ಯಜ್ಞದಲ್ಲಿ ಐಶ್ವರ್ಯ ಅಡಗಿದೆ [ಶತಪಥ ಬ್ರಾ.1-7-1.9]

105. ಯಜ್ಞವೇ ವಿಶ್ವದ ಉತ್ಪತ್ತಿ, ಸ್ಥಾನ ಮತ್ತು ಯಜ್ಞವೇ ಸರ್ವ ಶ್ರೇಷ್ಠ ಕರ್ಮ [ಶತಪಥ ಬ್ರಾ.1-7-4-5]

106. ಯಜ್ಞವೇ ದೇವತೆಗಳ ವಿಭೂತಿ [ಶತಪಥ ಬ್ರಾ.1/7-2/00]

107. ಇಂದ್ರನೇ ಯಜ್ಞದ ದೇವತೆ [ಶತಪಥ ಬ್ರಾ.3/5-2-9]

CC-0. In Public Domain. Digitized by eGangotri

108. ಯಜ್ಞವೇ ದೇವತೆಗಳ ಆಹಾರ [ಶತಪಥ ಬ್ರಾ.5/1.1.2]

109. ಯಜ್ಞವೇ ಸಮಸ್ತ ಪ್ರಾಣಿಗಳ ರಕ್ಷಕ–ಪಾಲಕ–ಪೋಷಕ [ಶತಪಥ ಬ್ರಾ.9/4.1]

110. ಯಜ್ಞ ಸಮಸ್ತ ಪ್ರಾಣಿಗಳ ಮತ್ತು ದೇವತೆಗಳ ಆತ್ಮ [ಶತಪಥ ಬ್ರಾ.14/3.1.1]

111. ಯಜ್ಞಮಂತ್ರೋಚ್ಚಾರಣೆಯಿಂದ ವಾಯುಮಂಡಲದಲ್ಲಿ ಪರಿವರ್ತನೆಯಾಗುತ್ತದೆ. ಇದರಿಂದಾಗಿ ಸಮಸ್ತ ವಿಶ್ವದಲ್ಲಿ ಧರ್ಮಚಕ್ರದ ಸಂಚಾಲನವಾಗುತ್ತದೆ. [ಐತ್ತರೀಯ ಬ್ರಾಹ್ಮಣ 1/4.3]

112. ಯಜ್ಞವೇ ತಪಸ್ಸು [ತೈತರೀಯ ಬ್ರಾ. 10.8]

113. ಯಜ್ಞವೇ ಸೂರ್ಯ [ಗೋಪಥ ಬ್ರಾ. 1.33]

114. ಯಜ್ಞಃ ಪ್ರಜಾಪತಿಃ [ಶತಪಥ ಬ್ರಾ.]

115. ದಾನಶೀಲೋ ಭವೇದ್ರಾಜಾ ಯಜ್ಞಶೀಲಶ್ಚ ಭಾರತ
[ಮಹಾಭಾರತ ಶಾಂತಿಪರ್ವ 61/53]
ಹೇ ಯುಧಿಷ್ಠಿರ ! ದಾನ ಮಾಡುವವನು ಮತ್ತು ಯಜ್ಞ ಮಾಡುವವನು ರಾಜನಾಗುತ್ತಾನೆ.

116. ನ ಹಿ ಯಜ್ಞಸಮಂ ತ್ರಿಷು ಲೋಕೇಷು ವಿದ್ಯತೇ
[ಮಹಾಭಾರತ ಶಾಂತಿಪರ್ವ 61–53]
ಮೂರು ಲೋಕಗಳಲ್ಲಿ ಯಜ್ಞಕ್ಕಿಂತಲೂ ಉತ್ತಮವಾದುದು ಬೇರೆ ಯಾವುದೂ ಇಲ್ಲ

117. ಹುತೇನ ಶಾಮ್ಯತೆ ಪಾಪಮ್ [ಮಹಾಭಾರತ ಶಾಂತಿಪರ್ವ 161–2]
ಹವನ–ಹೋಮಾದಿಗಳನ್ನು ಮಾಡುವುದರಿಂದ ಪಾಪಗಳು ಶಮನವಾಗುತ್ತವೆ.

118. ನಾಸ್ತಿ ಯಜ್ಞಸಮಂ ದಾನಂ ನಾಸ್ತಿ ಯಜ್ಞಸಮೋ ವಿಧಿಃ ।
ಸರ್ವಧರ್ಮ ಸಮುದ್ದೇಶೋ ದೇವಿ ಯಜ್ಞೆ ಸಮಾಹಿತಃ॥ [ಮಹಾಭಾರತ]
ಪ್ರಪಂಚದಲ್ಲಿ ಯಜ್ಞಕ್ಕೆ ಸಮಾನವಾದ ದಾನ ಯಾವುದೂ ಇಲ್ಲ ಮತ್ತು ಯಜ್ಞಕ್ಕೆ ಸಮಾನವಾದ ಯಾವ ವಿಧಿ–ವಿಧಾನಗಳೂ ಇಲ್ಲ. ಯಜ್ಞದಿಂದಲೇ ಸಮಸ್ತ ಧರ್ಮಗಳ ಉದ್ದೇಶ ಪೂರ್ಣವಾಗುವುದು.

119. ನ ಯಜ್ಞಾ ಅಮುಂ ಲೋಕಂ ಪ್ರಾಪ್ನುವಂತಿ ಕಥಚ್ಚನ [ಮ.ಭಾ. 151/8]
ಯಾರು ಯಜ್ಞ ಮಾಡುವುದಿಲ್ಲವೋ ಅವರಿಗೆ ಪರಲೋಕ ಪ್ರಾಪ್ತಿಯೇ ಆಗುವುದಿಲ್ಲ.

120. ಯಜ್ಞ ಶೇಷ ಅಮೃತ ಸಮಾನ [ಮ.ಭಾ. 242/30]

121. ಯಜ್ಞದಿಂದ ಸಂತಾನೋತ್ಪತ್ತಿಯಾಗುವುದು [ಮ.ಭಾ. ಶಾಂತಿಪರ್ವ 263/10]

122. ಯಜ್ಞೋ ಹಿ ವಿಶ್ವಸ್ಯ ಭುವನಸ್ಯ ನಾಭಿಃ [ಮ.ಭಾ.]

CC-0. Vasishtha Tripathi Collection by Siddhanta eGangotri Gyaan Kosha. Digitized by Sri Jayachamarajendra Book Centre, Sringeri

CC-0. In Public Domain. Digitized by eGangotri

123. ಯಜ್ಞೇನ ದ್ವಿಷಂತೋ ಮಿತ್ರಾ ಭವಂತಿ
ಯಜ್ಞೇ ಸರ್ವ ಪ್ರತಿಷ್ಠಿತಂ ತಸ್ಮಾದ್ಯಜ್ಞಂ ಪರಮಂ ವದಂತಿ ॥
[ನಾರಾಯಣೋಪನಿಷತ್ತು]

ಯಜ್ಞದಿಂದ ಶತ್ರುವಾಗಿರುವವನೂ ಕೂಡ ಮಿತ್ರನಾಗುತ್ತಾನೆ. ಯಜ್ಞದಲ್ಲಿ ಎಲ್ಲಾ ಸರ್ವೋತ್ತಮ ಗುಣಗಳೂ ಇವೆ. ಆದ್ದರಿಂದ ಯಜ್ಞವು ಸರ್ವ ಶ್ರೇಷ್ಠ ಕರ್ಮವೆಂದು ಕರೆಯಲಾಗಿದೆ.

124. ಪುರುಷನೇ ಯಜ್ಞ [ಛಾಂದೋಗ್ಯೋಪನಿಷತ್ 3/16]

125. ಯಜ್ಞವೇ ದೇವತೆ. [ನಾರಾಯಣೋಪನಿಷತ್ 78]

129. ಯಜ್ಞದ್ವಾರಾ ಯಾರು ಯಾವ ವಸ್ತುವನ್ನು ಇಚ್ಚಿಸುತ್ತಾರೋ ಅದೇ ವಸ್ತುವು ಅವನಿಗೆ ಲಭ್ಯವಾಗುವುದು. [ಕಠೋಪನಿಷತ್ 1/2]

130. ಯಜ್ಞ ಮಾಡುವುದರಿಂದ ಯಜಮಾನನಿಗೆ ಬ್ರಹ್ಮಲೋಕ ಪ್ರಾಪ್ತಿಯಾಗುವುದು [ಮಂಡಕೋಪನಿಷತ್ 2/6]

131. ಯಜ್ಞವು ದೇವತೆಗಳ–ಪಿತೃಗಳ ಮತ್ತು ಋಷಿಗಳ ಜೀವನವೇ ಆಗಿದೆ. [ಪ್ರಶ್ನೋಪನಿಷತ್ 2/1.8]

132. ಯಜ್ಞದಿಂದಲೇ ಸರಸ್ವತಿಯು ಪ್ರಸನ್ನಳಾಗುತ್ತಾಳೆ. [ಸರಸ್ವತ್ಯೋಪನಿಷತ್]

133. ಸೃಷ್ಟಿಕರ್ತ ಬ್ರಹ್ಮನು ಮನುಷ್ಯನ ಜೊತೆ ಜೊತೆಯಲ್ಲೇ ಯಜ್ಞವನ್ನೂ ಸೃಷ್ಟಿಸಿದನು. [ಗೀತೋಪನಿಷತ್ 3/10]

134. ಸೃಷ್ಟಿ ಚಕ್ರದ ಸಂಚಾಲನೆಯಾಗುತ್ತಿರುವುದು ಯಜ್ಞದಿಂದಲೇ. [ಗೀತೋಪನಿಷತ್ 16/1]

135. ಯಜ್ಞದಿಂದಲೇ ಐಶ್ವರ್ಯದ ಪ್ರಾಪ್ತಿಯಾಗುವುದು [ಸರಸ್ವತ್ಯೋಪನಿಷತ್

136. ಜ್ಞಾನವಂತನ ಜೀವಿತವೆಲ್ಲಾ ಒಂದು ಯಜ್ಞವೇ [ತೈತ್ತರೀಯ ಉಪನಿಷತ್]

137. ಯಜ್ಞಃ ಸರ್ವಗತೋ ಹರಿಃ ಭಾಗವತ. [8/1/18]

138. ಯಜ್ಞೋ ಹಂ ಭಗವತ್ತಮಃ [ಭಾ.]

139. ನಾರಾಯಣ ಪರಾ ಮುಖಾಃ ಭಾ. [2/5–15]

140. ಭಗವಾನ್ ಯಜ್ಞ ಪುರುಷಃ ಭಾ. [4/1418]

141. ವಾಸುದೇವ ಪರಾ ಮುಖಾಃ ಭಾ. [1/3/28]

ಯಾವ ಭಾರತ ದೇಶದಲ್ಲಿ ಎಲ್ಲೆಲ್ಲಿಯೂ ಯಜ್ಞ ಕರ್ಮಗಳು ಸದಾ ತಾಂಡವವಾಡುತ್ತಿದ್ದವೋ–ಎಲ್ಲೆಲ್ಲಿಯೂ ಆ ವೇದಘೋಷಗಳ–ಮಂಗಳ ನಿನಾದಗಳು ಮೊಳಗುತ್ತಿದ್ದವೋ, ಎಲ್ಲಿ ಶ್ರದ್ಧಾಭಕ್ತಿಗಳು ನೆಲಸಿದ್ದವೋ–ಅಲ್ಲಿ ಇಂದು ಯಜ್ಞವೆಂದರೆ ಸಾಕು ದೂರ ಸರಿಯುತ್ತಿದ್ದಾರೆ, ಬೆದರುತ್ತಿದ್ದಾರೆ, ಅವರ ಪಾಲಿಗೆ ವ್ಯರ್ಥವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಣಮಿಸುತ್ತಿದೆ. ಇದರ ಭಯಂಕರ ಪರಿಣಾಮವೇ ಇಂದಿನ ಅತಿವೃಷ್ಟಿ–ಅನಾವೃಷ್ಟಿ–ಅಸಂತುಷ್ಟ –ಆಹಾರ ಅಭಾವ–ಅಶಾಂತಿ–ಅನಾದರ–ಹಾಹಾಕಾರ, ಅನಾರೋಗ್ಯ–ಅಸಮಾಧಾನ–ಆವೇಗ–ಅತೃಪ್ತಿ–ಅನೀತಿ–ಅತ್ಯಾಚಾರ–ಅನಾಚಾರ. ಅಪನಂಬಿಕೆಗಳು ಎಲ್ಲೆಲ್ಲಿಯೂ ತಾಂಡವಾಡುತ್ತಿವೆ. ಇದು ಕಲಿಯ ಅಟ್ಟಹಾಸ.

ಋಣತ್ರಯಗಳು

ಮಾನವನು ಋಷಿಋಣ, ದೇವಋಣ ಮತ್ತು ಪಿತೃಋಣಗಳೆಂಬ ಮೂರು ಋಣಗಳಿಂದ ಬಂಧಿಸಲ್ಪಟ್ಟಿರುತ್ತಾನೆ. ಇವುಗಳಿಂದ 'ಮುಕ್ತವಾಗಲು ಯಜ್ಞ, ಅಧ್ಯಯನ ಮತ್ತು ಸಂತಾನೋತ್ಪತ್ತಿ'– ಇವು ಮುಖ್ಯ ಮೂರು ಆಧಾರಗಳು.

ಯಜ್ಞ: ನದಿಗಳಿಂದ ತಮ್ಮಲ್ಲಿರುವ ನೀರನ್ನು ತಾವೇ ಎಂದೂ ಕುಡಿಯುವುದಿಲ್ಲ. ಮರಗಳು ತಮ್ಮ ಹಣ್ಣು–ಕಾಯಿಗಳನ್ನು ತಾವೇ ಎಂದೂ ತಿನ್ನುವುದಿಲ್ಲ. ಹೂವಿನ ಗಿಡಗಳು ಹೂವಿನ ಸುಗಂಧವನ್ನು ತಾವೇ ಉಪಯೋಗಿಸಿಕೊಂಡು ತಮ್ಮನ್ನು ತಾವೇ ಅಲಂಕರಿಸಿ ಕೊಳ್ಳುವುದಿಲ್ಲ. ಅಂದಿನಿಂದ ಇಂದಿನವರೆಗೂ ಅವೆಲ್ಲಾ ಸತತವಾಗಿ ಸೇವೆ ಮಾಡುತ್ತಲೇ ಇವೆ. ಇಂತಹ ನಿಸ್ವಾರ್ಥ ಸೇವೆಗೆ, ಪರೋಪಕಾರಕ್ಕೆ, ತ್ಯಾಗಕ್ಕೆ 'ಯಜ್ಞಭಾವ' ಎಂದು ಹೆಸರು! ಇದು ವಿಶ್ವನಿಯಮ. ನಮಗಾಗಿಯೇ ಸೃಷ್ಟಿಕರ್ತನು ದಯಪಾಲಿಸಿರುವ ಕೊಡುಗೆ, ಅನುಗ್ರಹ. ಏಕೆಂದರೆ ಇಂತಹ ಯಜ್ಞದಲ್ಲಿ ಭಗವಂತನು ಪ್ರತಿಷ್ಠಿತನಾಗಿರುತ್ತಾನೆ ಆದ್ದರಿಂದಲೇ ಯಜ್ಞವೆಂದರೆ ಪರಮಾತ್ಮನ ಪೂಜೆಯೇ ಸರಿ.

"ಅಶ್ವತ್ಥಮೇಕಂ ಪಿಚುಮಂದಮೇಕಂ ।
ನ್ಯ–ಗ್ರೋಧಮೇಕಂ ದಶತಿಂತ್ರಿಣೀಕಂ ।
ಕಪಿತ್ಥ ಬಿಲ್ವಾಮಲಕತ್ರಯಂಚ ।
ಪಂಚಾಮ್ರ ರೋಪಿ ನರಕಂ ನ ಪಶ್ಯೇತ್ ॥"

ಒಂದು ಅಶ್ವತ್ಥ, ಒಂದು ಬೇವು, ಒಂದು ಆಲ, ಹತ್ತು ಹುಣಸೆ–ಬೇಳ–ಬಿಲ್ವ, ಮೂರು ನೆಲ್ಲಿಯಮರ ಹಾಗೂ ಐದು ಮಾವಿನ ಮರಗಳನ್ನು ಬೆಳಸಿದರೆ ನರಕದರ್ಶನವೇ ಆಗುವುದಿಲ್ಲ.

"ದೇವತಾಗ್ರಹ ರೂಪೇಣ ಪ್ರಯಚ್ಛಂತಿ ಶುಭಾಶುಭಮ್"– ಸೂರ್ಯ ಚಂದ್ರಾದಿ ಗ್ರಹಗಳೆಲ್ಲಾ ದೇವತಾ ಪ್ರತಿನಿಧಿಗಳು. ಅವುಗಳು ತಮ್ಮ ದಶಾಅಂತರ್ದಶೆಗಳಲ್ಲಿ ಎಲ್ಲಾ ಜೀವರಾಶಿಗಳ ಮೇಲೆ ತಮ್ಮ ಪ್ರಭಾವ ಬೀರುತ್ತವೆ. ಮಾನವರ ಕರ್ಮಾನುಸಾರವಾಗಿ ಅವರಿಗೆ ಫಲಾಫಲಗಳನ್ನು ಅನುಗ್ರಹಿಸುವರು.

ಗ್ರಹಪೀಡನೆಗೆ ಮನುಷ್ಯನು ಒಳಗಾಗುವುದಿರಲಿ, ಯಕ್ಷ–ರಾಕ್ಷಸ–ಕಿನ್ನರ–ಕಿಂಪುರುಷ–ಗಂಧರ್ವ–ರಾಜಮಹಾರಜರುಗಳೂ–ದೇವತೆಗಳೂ ಕೂಡ ಗ್ರಹಗಳ ಪೀಡನೆಗೆ ಒಳಗಾಗಿದ್ದಾರೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಪ್ರತಿದಿನವೂ ಜಪಿಸಬಹುದಾದ ನವಗ್ರಹ 'ಬೀಜ' ಮಂತ್ರಗಳು

1. ಭಾನುವಾರ ಓಂ ಹ್ರಾಂ ಹ್ರೀಂ ಹ್ರೌಂ ಸಹ ಸೂರ್ಯಾಯ ನಮಃ
2. ಸೋಮವಾರ ಓಂ ಶ್ರಾಂ ಶ್ರೀಂ ಶ್ರೂಂ ಸಹ ಚಂದ್ರಾಯ ನಮಃ
3. ಮಂಗಳವಾರ ಓಂ ಕ್ರಾಂ ಕ್ರೀಂ ಕೂಂ ಸಹ ಮಂಗಳಾಯ ನಮಃ
4. ಬುಧವಾರ ಓಂ ಸ್ರಾಂ ಸ್ರೀಂ ಸ್ರೂಂ ಸಹ ಬುಧಾಯ ನಮಃ
5. ಗುರುವಾರ ಓಂ ಗ್ರಾಂ ಗ್ರೀಂ ಗ್ರೂಂ ಸಹ ಗುರವೇ ನಮಃ
6. ಶುಕ್ರವಾರ ಓಂ ದ್ರಾಂ ದ್ರೀಂ ದ್ರೂಂ ಸಹ ಶುಕ್ರಾಯ ನಮಃ
7. ಶನಿವಾರ ಓಂ ಖ್ರಾಂ ಖ್ರೀಂ ಖ್ರೂಂ ಸಹ ಶನೈಶ್ಚರಾಯ ನಮಃ
8. ರಾಹು ಓಂ ಬ್ರಾಂ ಬ್ರೀಂ ಬ್ರೂಂ ಸಹ ರಾಹವೇ ನಮಃ
9. ಕೇತು ಓಂ ಪ್ರಾಂ ಪ್ರೀಂ ಪ್ರೂಂ ಸಹ ಕೇತವೇ ನಮಃ

108 ಸಾರಿಯಾದರೂ ಜಪಿಸಬೇಕು

ಸೂರ್ಯ ಶೌರ್ಯ ಮಥೇದುರಿಂದ್ರ ಪದವೀಂ ಸನ್ಮಂಗಳಂ ಮಂಗಳಃ!
ಸದ್ಬುದ್ದಿಂಚ ಬುಧೋ ಗುರುಶ್ಚ ಗುರುತಾಂ
ಶುಕ್ರಃ ಶುಭಂ ಶಂ ಶನಿ ॥
ರಾಹುರ್ಬಾಹು ಬಲಂ ಕರೋತು ವಿಜಯಂ ಕೇತುಃ ।
ಕುಲಸ್ಯೋನ್ನತೀಂ ನಿತ್ಯಂ ಪ್ರೀತಿಕರಾ ಭವಂತುಃ
ಸತತಂ ಸರ್ವೇನು ಕೂಲಗ್ರಹಾಃ ॥

ಆದಿತ್ಯಾದಿ ನವಗ್ರಹ ದೇವತಾಭ್ಯೋ ನಮಃ

ಅಗ್ನಿ

ವೇದಗಳ ಆರಂಭವೇ ಅಗ್ನಿ ಪ್ರಾರ್ಥನೆಯಿಂದ.

ಆದಿ ಋಕ್ಕುಗಳು ಮತ್ತು ಅಗ್ನಿ

ಋಗ್ವೇದದಲ್ಲಿ

"ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವಮೃತಿಜ್ವಂ ।
ಹೋತಾರಂ ರತ್ನ ಧಾವತಂ ॥" [ಋ. 1/1.1]

ಯಜಯರ್ವೇದದಲ್ಲಿ

"ಇಷ್ವೇತ್ವೋರ್ಜೇ ತ್ವಾವಾಯವಸ್ಥೋ ಪಾಯವಸ್ಥ ದೇವೋ ವಸ್ಸವಿತಾ ।
ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣೇ ॥" [ಯ. 1/1.1]

ಸಾಮವೇದದಲ್ಲಿ

"ಅಗ್ನ ಆಯಾಹಿವೀತಯೇ ಗೃಣಾನೋ ಹವ್ಯದಾತಯೇ ।

Sri Vidyabharathi Book Centre, Sringeri

ನಿಹೋತಾಸತ್ಸಿ ಬರ್ಹಿಷಿ. ॥" [ಸಾ. 1/1.1]
CC-0. In Public Domain. Digitized by eGangotri

ಅಥರ್ವಣ ವೇದದಲ್ಲಿ

"ಶಂನೋ ದೇವಿ ರಭಿಷ್ಟಯ ಆಪೋ ಭವಂತು ಪೀತಯೇ ।
ಶಂಯೋ ರಭೀಸ್ರವಂತುನಃ ॥ [ಅ.1/1.1]

ಮಳೆಗಾಗಿ ಯಜ್ಞ

'ಯಜ್ಞವೇ ದೇವರು. ಯಜ್ಞವೇ ಋಷಿಗಳ ಉಸಿರು, ಯಜ್ಞವೇ ದೈವೀಸಂಪತ್ತು, ಯಜ್ಞವೇ ಸಾಕ್ಷಾತ್ ಯಜ್ಞಪತಿಯು, ಯಜ್ಞವೇ ವಿಶ್ವದ ಉತ್ಪತ್ತಿ ಸ್ಥಾನವು.

ಪರ್ಜನ್ಯಯಾಗ : (ಇಂದ್ರಯಾಗ)

ಗೀತೆಯಲ್ಲಿ ಶ್ರೀಕೃಷ್ಣನು 'ಯಜ್ಞಾತ್ಭವತಿ ಪರ್ಜನ್ಯಃ' ಎಂದು ತಿಳಿಸಿದ್ದಾನೆ.

ಮಳೆಬಾರದೆ ಇರಲು ಪ್ರಕೃತಿಯಲ್ಲಿರುವ ಮೂಲ ತಡೆ ಅಥವಾ ಅಡ್ಡಿ–ಆತಂಕಗಳ ನಿವಾರಣೆಗೆ ನಾವು ಮಾಡುವ ಯಜ್ಞ–ಯಾಗಾದಿಗಳೂ ಸಹಾಯವಾಗುತ್ತವೆ! ಯಾವುದೋ ಒಂದು ಅಭಿಶಾಪ, ದುರಿತ, ತೊಂದರೆ ಮುಂತಾದ ಅಸಹಜವಾದ ಪ್ರಕೃತಿಯ ವಿಪ್ಲವ ಕರಗಬೇಕು. ಅದಕ್ಕಾಗಿಯೇ ಯಜ್ಞ–ಯಾಗಾದಿಗಳು!

ಈ ಮಂತ್ರಗಳಿಂದ 'ಹೋಮ' ಮಾಡಿದರೆ ಮಳೆ ಬರುತ್ತದೆ.

1. 'ಓಂ ಧೃವಾಸುತ್ವಾಸು .....' [ಋ. 8/99.7]
   ಈ ಮಂತ್ರವನ್ನು ಗಂಗಾ ಇತ್ಯಾದಿ ನದಿಯಲ್ಲಿ ಅಥವಾ ಯಾವುದಾದರೂ ಶುದ್ಧ ಕೆರೆ, ಕೊಳದಲ್ಲಿ ನಾಭಿ ಪರ್ಯಂತ ಜಲದಲ್ಲಿ ನಿಂತು ಹನ್ನೊಂದು ಸಾವಿರ ಜಪ ಮಾಡುವುದರಿಂದ ಅಥವಾ ಹವನ ಕಾರ್ಯ ನಡೆಸುವುದರಿಂದ ವರುಣದೇವನು ಸಂತುಷ್ಟನಾಗಿ ಮಳೆಯನ್ನು ಸುರಿಸುತ್ತಾನೆ.
2. 'ಓಂ ಆಪೋಹಿಷ್ಠಾ ಮಯೋಭುವಃ.....' [ಶು. ಯ. 11/50.52]
   ಈ ಮೂರು ಮಂತ್ರಗಳಿಂದ ಒಂದು ಸಾವಿರ ಆಹುತಿ ಅರ್ಪಿಸಿದರೆ ಮಳೆ ಬರುತ್ತದೆ.
3. 'ಓಂ ಹಿರಣ್ಯಾವರ್ಣಾಂ.....' [ಋಗ್ವೇದ ಪರಿಶಿಷ್ಟಭಾಗ, ಶ್ರೀಸೂಕ್ತ]
   ಈ ಮಂತ್ರದಿಂದ ಒಂದು ಸಾವಿರ 'ಆಹುತಿ' ಅರ್ಪಿಸಿದರೆ ಮಳೆ ಬರುತ್ತದೆ.
4. 'ಓಂ ತ್ರ್ಯಂಬಕಂ ಯಜಾಮಹೆ.....' [ಶು.ಯ. 3/60]
   ಈ ಮಂತ್ರದಿಂದ ಒಂದು ಸಾವಿರ ಹವನ ಮಾಡುವುದರಿಂದ ಮಳೆ ಬರುತ್ತದೆ.
5. 'ಗಾಯತ್ರಿ' ಮಂತ್ರವನ್ನು 1008 ಬಾರಿ 'ಆಹುತಿ' ಯಾಗಿ 'ಹೋಮ' ಮಾಡಿದರೆ ಮಳೆ ಬರುತ್ತದೆ. ಅಥವಾ ನಾಭಿ ಪರ್ಯಂತ ಜಲದಲ್ಲಿ ನಿಂತು ಒಂದು ಸಪ್ತಾಹದವರೆಗೆ, ಕೊನೆಯ ಪಕ್ಷ 108 ಬಾರಿ ಜಪಿಸುವುದರಿಂದ ಮಳೆ ಬರುತ್ತದೆ!

Sri Vidyabharathi Book Centre, Sringeri

CC-O. In Public Domain. Digitized by eGangotri

6. 'ಓಂ ಜಾತವೇದಸೇ ಸುನವಾಮ.....' [ಋ. 1/99/1]
ಈ ಮಂತ್ರದಿಂದ ಒಂದು ಸಾವಿರ 'ಹವನ' ಮಾಡುವುದರಿಂದ ಮಳೆ ಬರುತ್ತದೆ.

7. ಓಂ ತಿಸ್ರೋ ವಾಚಃ.....' [ಋ. 7/101/1.6]
ಈ ಸೂಕ್ತವನ್ನು ಹತ್ತು ಸಾವಿರ ಜಪ ಮಾಡುವುದರಿಂದ ಮಳೆ ಬರುತ್ತದೆ.

8. 'ಓಂ ತಸ್ಯಃ ಸಮುದ್ರಾಃ..... [ಋ. 1/164–42]
ಈ ಮಂತ್ರದಿಂದ 1008 ಬಾರಿ ಜಪ ಮಾಡುವುದರಿಂದ ಮಳೆ ಬರುತ್ತದೆ!

9. **'ಓಂ ನಮೋ ಭಗವತೆ ವರುಣಾಯ ಜಲಾಧಿಪತಯೇ**
ಮಕರವಾಹನಾಯ ಪಾಶುಹಸ್ತಾಯ ಏಹಿ ಇಂದ್ರ।
ಏಹಿ ವಾಯೋ, ಸದ್ಯಃ ಸದ್ ವೃಷ್ಟಿ ಹೇತವೇ ಸರ್ವಾನ್
ಮೇಘನಾಕರ್ಷಯ ಆಕರ್ಷಕ ಸ್ವಾಹಾ॥'
ಈ ಮಂತ್ರವನ್ನು 1008 ಬಾರಿ ಜಪ, ಅಷ್ಟೇ ಸಲ ಹೋಮ ಮಾಡುವುದರಿಂದ ಮಳೆ ಬಂದೇ ಬರುತ್ತದೆ.

10. ಹನ್ನೊಂದು ದಿನ ಅಖಂಡ ರುದ್ರಾಭಿಷೇಕ ಮತ್ತು 'ಮಹಾರುದ್ರಹೋಮ' ನಡೆಸುವುದರಿಂದ ಮಳೆ ಬಂದೇ ಬರುತ್ತದೆ.

11. 'ಶತಚಂಡೀಹೋಮ' ಮಾಡಿಸುವುದರಿಂದ ಮಳೆ ಬರುತ್ತದೆ.

12. 'ಪಂಚದಶೀಯಂತ್ರ'ವನ್ನು ಒಂದು ಸಾವಿರ ಬರೆದು ಪವಿತ್ರ ನದಿಯಲ್ಲಿ ಪ್ರವಹಿಸುವುದರಿಂದ ಮಳೆ ಬರುತ್ತದೆ.

13. 'ಓಂ ನಮೋ ಭಗವತೆ ಇಂದ್ರವಜ್ರಾಯ–ಮದ್
ಗರಂ ಧಾರಯ ಧಾರಯ ಅಸ್ಮಿನ್ ದೇಶೆ, ನಗರೆ, ಗ್ರಾಮೆ, ಚ–
ಮೇಘವೃಷಿಂ ಕುರುಕುರು ಸ್ವಾಹಾ'
ಈ ಮಂತ್ರದಿಂದ 1100 ಹವನ ಮಾಡಿದರೆ ಮಳೆ ಬರುತ್ತದೆ.

14. 1. ಓಂ ಹ್ರೀಂ ಮೇಘ ದ್ವಿತೀಯಾಯ ನಮಃ ಸಬಲಯೆ ಸ್ವಾಹಾ ।
2. ಓಂ ಹ್ರೀಂ ಮೇಘ ದ್ವಿತೀಯಾಯ ಕಮಲೋದ್ಭವಾಯ ಸ್ವಾಹಾ ।
3. ಓಂ ಹ್ರೀಂ ನಂದಿಕೇಶ ರಾಜಾಯ ಮೇಘ ರಾಜಾಯ ಅಧುರ
ವಿನಾಶಾಯ ಮೇಘರಾಜಾಯ ಸ್ವಾಹಾ ।
4. ಓಂ ಹ್ರೀಂ ಸಿಂಹರಾಜಾಯ ಕೈಲಾಸವಾಸಿನೇ ಮೇಘರಾಜಾಯ ಸ್ವಾಹಾ ।
5. ಓಂ ಹ್ರೀಂ ಕುಂಭರಾಜಾಯ ಶೃಂಗನಿವಾಸಿನೇ ಮೇಘರಾಜಾಯ ಸ್ವಾಹಾ ।
ಈ ಐದು ಮಂತ್ರಗಳನ್ನು ಕ್ರಮಶಃ 108 ಸಾರಿ 'ಜಪ' ಮತ್ತು 'ಹೋಮ' ಮಾಡುವುದರಿಂದ ಮಳೆ ಬಂದೇ ಬರುತ್ತದೆ. ।

15. ಮಳೆಗಾಗಿ ಸಾಮೂಹಿಕ 'ವರುಣ ಪ್ರಾರ್ಥನಾ ಮಂತ್ರ'

Sri Vidyabharathi Book Centre, Sringeri

CC-0. In Public Domain. Digitized by eGangotri

ಓಂ ನಮೋಽಧರವತೇ ವರುಣಾಯ ಅಪಾಂಪತಯೇ, ಮಕರವಾಹನಾಯ, ಪಾಶು ಹಸ್ತಾಯ, ವಿಷ್ಣುರೂಪಾಯ, ಶಿವಭಕ್ತಾಯ, ನಾನಾಲಂಕಾರಾಲಂಕೃತ ಅಂಬುಧಿ ವಸ್ತ್ರಾಚ್ಛಾದನ, ವಿದ್ಯುತ್ ಪ್ರಕಾಶ ದೀಪ್ತಿ ಜ್ವಾಲಾಮಾಲಿ, ವೊಮಿಘನಘರ್ಜಿತ ಸವನದಿನದಿ ತಟಾಕ, ವಾಲೀ ಕೂಪಸರಃ, ಪಲ್ವಲ, ಸಮುದ್ರಾಧೀಶ, ಬ್ರಹ್ಮವಿಷ್ಣು ಮಹೇಶಾತೀತ, ಅಖಿಂಡ ಸಚ್ಚಿದಾನಂದ, ಅದ್ವಿತೀಯ ಸ್ವಪ್ರಕಾಶ ।

ಸರ್ವಭೂದೇವರಾಧಿಪ, ಸರ್ವಭೋಗೀರ್ವಾಣ ರಕ್ಷಕ, ಸರ್ವಜೀವ ಜೀವತೋ ಶೀರ್ಷಮೇವ, ವರುಣಾ ಆಗಚ್ಛ, ಸದ್ಯಃ ಸುವೃಷ್ಟಿಂ ಕುರು ಕುರು, ವರ್ಷಯ ವರ್ಷಯ, ಧಾರಾಂ ವಿಮುಂಚ ವಿಮುಂಚ, ವರ್ಷಧರಾಂತಲೇ ಧಾರಯ ಧಾರಯ, ವೃಷ್ಟಿಂ ಶ್ರಾವಯ-ಶ್ರಾವಯ ॥

ವರುಣ ಏಹಿ, ಪರ್ಜನ್ಯ ಏಹಿ, ಪ್ರಚೇತ ಏಹಿ, ಸುರಪಿನ್ ಏಹಿ, ಅಪಾಂತತ ಏಹಿ, ಏಹೀ ವರುಣ, ಏಹೀ ಇಂದ್ರ, ಏಹೀ ಪರ್ಜನ್ಯ, ಏಹೀ ಪ್ರಚೇತ, ಏಹೀ ಋಷ್ಯಶೃಂಗ, ಅಸ್ಮಾತ್ ನಗರಾಭಿಮುಖಂ, ಗ್ರಾಮಾಭಿಮುಖಂ, ಆಕರ್ಷಯ, ಪ್ರತಿಬಂಧಕಾ ಅವಗ್ರಹಾನ್, ನಿವಾರಯ ನಿವಾರಯ, ಏಹಿ ಅಗಸ್ತ್ಯ, ಸರ್ವಾನ್ ಮೇಘಾನ್, ವರ್ಷ ಬಿಂದೂನ್ ವಿಮುಂಚ, ವರ್ಷಧಾರಾ ಪೂರ್ವಕಂ ಆಗಚ್ಛ ಆಗಚ್ಛ!

ಸುವೃಷ್ಟಿ ದಾನೇನ ಸಸ್ಯವೃದ್ಧಿ ದ್ವಾರ, ವಸುಂಧರಾನ್ ವರ್ಷಯ ವರ್ಷಯ! ಸುವೃಷ್ಟಿಂ ದೇಹಿ ಪರ್ಜನ್ಯೋಃ.

ಓ! ಏಹಿ ಇಂದ್ರಾ, ಏಹಿ ವರುಣಾ, ಏಹಿ ವಾಯೋ, ಏಹಿ ಪರ್ಜನ್ಯಾ, ಐರಾವತರೂಢಾ ಸಂಕರ ಕುಂಡಲ ವಜ್ರಹಸ್ತ ಕಿರೀಟ ಧಾರಾ, ಸದ್ಯಃ ಸುವೃಷ್ಟಿಂದೇಹಿ, ದೇಹಿವೃಷ್ಟಿಂ, ದೇಹಿವೃಷ್ಟಿಂ ॥

ಹನ್ನೊಂದು ಸಾರಿ ರುದ್ರ ಹೇಳುವುದು. ಪ್ರತಿ ಬಾರಿಯೂ ಸರ್ವರೂ ಸಾಮೂಹಿಕವಾಗಿ ಹೂವು-ಮಂತ್ರಾಕ್ಷತೆ ತೆಗೆದುಕೊಂಡು ಹೊರಬಂದು ಶಿವಾಲಯವನ್ನು ಪ್ರತಿಯೊಬ್ಬರೂ ಪ್ರದಕ್ಷಿಣೆ ಹಾಕಿ ಕೈಯಲ್ಲಿರುವ ಹೂವು-ಮಂತ್ರಾಕ್ಷತೆಯನ್ನು ಆಕಾಶದ ಕಡೆಗೆ ಪೂಜಿಸುವುದು.

ಪ್ರತಿಬಾರಿಯೂ ಮೇಲ್ಕಂಡ ವರುಣ ಪ್ರಾರ್ಥನೆ ಮಾಡುವುದು. ಎರಡೂ ಕೈಗಳನ್ನು ಮೇಲಕ್ಕೆತ್ತಿ ಶ್ರದ್ಧಾಭಕ್ತಿಯಿಂದ ಒಟ್ಟಾಗಿ ಸಾಷ್ಟಾಂಗ ನಮಸ್ಕಾರ ಮಾಡುವುದು. ಜೊತೆಗೆ ರುದ್ರಹೋಮ.

ಹೀಗೆ ಒಂದು ವಾರ ಮಾಡುತ್ತಾ ಬರಬೇಕು. ಕೊನೆಯ ದಿನ ಪೂರ್ಣಾಹುತಿಯ ಹೊತ್ತಿಗೆ ಸರಿಯಾಗಿ ಎಲ್ಲಿದ್ದರೂ ಮಳೆ ಬಂದೇ ಬರುವುದು.

ಯಜ್ಞ-ಯಾಗಾದಿಗಳ ಪ್ರಭಾವ ಅತಿ ವ್ಯಾಪಕವಾದವು. ಯಜ್ಞ-ಯಾವುದೇ ನಿರ್ದಿಷ್ಟ ಸ್ಥಾನದಲ್ಲಿ ಜರುಗಿದರೂ ಅದರ ಪ್ರಭಾವ ಸಾರ್ವತ್ರಿಕವಾದುದು. ಸಮಸ್ತ ದೇಶಕ್ಕೂ ವ್ಯಾಪಿಸುವಂತಹುದು. ಆದ್ದರಿಂದ ಯಜ್ಞ-ಯಾಗಾದಿಗಳನ್ನು ಮಾಡಿದ ಸ್ಥಳದಲ್ಲೇ, ಆ ಪರಿಧಿಯಲ್ಲೇ ಮಳೆ ಬರಬೇಕೆಂಬ ನಿಯಮವಿಲ್ಲ!

CC-0. Vidyabharati Book Gallery, Shimoga

ಕೇವಲ ಕರ್ನಾಟಕದಲ್ಲೇ, ಭಾರತದಲ್ಲೇ ಮಳೆ ಆಗಬೇಕು. ಬೇರೆ ಕಡೆಗೆ ಬೇಡವೆನ್ನುವಂತಿಲ್ಲ! ಆದ್ದರಿಂದ ಎಲ್ಲೇ ಯಜ್ಞ-ಯಾಗಾದಿಗಳು ಜರುಗಿದರೂ ಕೂಡ ಅದರ ಪ್ರಭಾವ ಸಮಗ್ರ ದೇಶದಲ್ಲೆಲ್ಲಾ ಉಂಟಾಗುತ್ತದೆ.

CC-O. In Public Domain. Digitized by eGangotri

ಮಾನವದ್ವಾರಾ ಹಾಗೂ ಪ್ರಕೃತಿದ್ವಾರಾ ನಿತ್ಯ ನಡೆಯುವ ಯಜ್ಞದ ಪರಿಣಾಮದಿಂದಾಗಿ ಕೇವಲ ಭಾರತದಲ್ಲಿ ಮಾತ್ರವೇ ಅಲ್ಲ ಉಳಿದ ದೇಶಗಳಲ್ಲೂ ಮಳೆ ಆಗುತ್ತಲೇ ಇರುತ್ತದೆ, ಭಗವಂತನು ಸರ್ವವ್ಯಾಪಿ! ಯಜ್ಞಫಲ ಚಿರಸ್ಥಾಯಿಯಾದುದು. ಪ್ರಾಚೀನಕಾಲದಲ್ಲಿ ನಡೆದಿರುವ ಯಜ್ಞಯಾಗಾದಿಗಳ ಫಲದಿಂದಾಗಿಯೇ ಇಂದೂ ಕೂಡ ಮಳೆ ಬೀಳುತ್ತಲೇ ಇರುವುದು! ಮುಂದೆಯೂ ಆಗುತ್ತಲೇ ಇರುವುದು! ಭಗವಂತನು ಸೀಮಾತೀತ! 'ಅವನಿಗೆ' ಯಾವ ಕಟ್ಟು ಕಟ್ಟಲೆಯೂ ಇಲ್ಲ. **'ಯಜ್ಞ ಮತ್ತು ಪ್ರಜೆಗಳು ಅವಳಿ ಸಂತಾನರು!'** ಇವರನ್ನು ಬೇರ್ಪಡಿಸಿದರೆ ಬರಗಾಲ ಬಂದಂತೆಯೇ, ಕ್ಷಾಮ ಡಾಮರಗಳನ್ನು ಆಹ್ವಾನಿಸಿದಂತೆಯೇ ಸರಿ, ಈ ಎರಡನ್ನೂ ನಿಕೃಷ್ಟ ಮಾಡಬಾರದು.

ಪೂರ್ಣಾಹುತಿ

ಅಗ್ನಿಗೆ ಅರ್ಪಿಸುವ ವಸ್ತುಗಳು ವ್ಯರ್ಥವೇ?

ಪೂರ್ಣಾಹುತಿಯಲ್ಲಿ ಅಗ್ನಿಗೆ ಅರ್ಪಿಸುವ ಬೆಲೆಬಾಳುವ ಪೀತಾಂಬರ-ರೇಷ್ಮೆಬಟ್ಟೆಗಳು-ತುಪ್ಪ-ಆಹಾರ ಧಾನ್ಯಗಳು-ಅಗತ್ಯವಸ್ತುಗಳು-ಕೊಬ್ಬರಿ-ಗೋಡಂಬಿ-ದ್ರಾಕ್ಷಿ ಹಣ್ಣು ಇತ್ಯಾದಿಗಳಿಂದ ಆ ವಸ್ತುಗಳು ಪೋಲಾಗುವುದಿಲ್ಲವೆ? ರಾಷ್ಟ್ರೀಯ ವ್ಯಯ! ಜೀವನೋಪಾಯದ ಮೇಲೆ ಮಾಡಿದ ಧಾಳಿಯಲ್ಲವೆ? ಅಭಾವದ ಸೃಷ್ಟಿಯಲ್ಲವೆ? ಇದರಿಂದೇನು ಪ್ರಯೋಜನ? ಅಗತ್ಯ ವಸ್ತುಗಳು ವ್ಯರ್ಥವಾಗುವುದಿಲ್ಲವೆ?

ಯಜ್ಞ ಹಾಗೂ ಅಗ್ನಿಯ ಯಥಾರ್ಥ ತತ್ವದ ಅರಿವೇ ಇಲ್ಲದವರು, ಆದರ್ಶವಾದಿಗಳೆಂದೂ, ವಿಚಾರವಾದಿಗಳೆಂದೂ, ಸಮಾಜ ಸುಧಾರಕರೆಂದೂ, ಉದ್ಧಾರಕರೆಂದೂ, ರಕ್ಷಕರೆಂದೂ ಹೇಳಿಕೊಳ್ಳುವ ನಾಸ್ತಿಕರ ಹುಸಿಯಾದ, ಅರ್ಥವಿಲ್ಲದ, ವಿವೇಚನೆ ಇಲ್ಲದ 'ಪ್ರಶ್ನೆ' ಇವಾಗಿರುತ್ತವೆ!

ಬಹಳ ಗಂಭೀರವಾಗಿ, ಆಳವಾದ ವಿವೇಚಿಸಿದರೆ ಗೊತ್ತಾಗುತ್ತದೆ. ಅಗ್ನಿಗೆ ಅರ್ಪಿಸುವ ಯಾವುದೇ ಪದಾರ್ಥಗಳಿಂದಲೂ ಕ್ಷಾಮ-ಡಾಮರಾದಿಗಳು ಸಂಭವಿಸುವುದಿಲ್ಲ. ಇದು ಆಕಾಶದಷ್ಟೇ ಸತ್ಯ! ಅಗ್ನಿಗೆ ಹಾಕಿದ ಯಾವೊಂದು ಪದಾರ್ಥವೂ ಸುಟ್ಟು ಹೋಗಿರುವಂತೆ ಕಂಡರೂ ಶಕ್ತಿಶಾಲಿ ಸೂಕ್ಷ್ಮಾತಿಸೂಕ್ಷ್ಮ ರೂಪಾಂತರವನ್ನು ತಾಳಿ ವಿಕಸಿಸುತ್ತಾ ಅವು ಅನೇಕ ಭಾಗಗಳಲ್ಲಿ ಇಡೀ ಬ್ರಹ್ಮಾಂಡದಲ್ಲಿ ಪ್ರವೇಶಿಸುತ್ತವೆ! ಇದರಿಂದ ಜಡ ಮತ್ತು ಚೇತನದ ಅಭ್ಯುದಯವಾಗುತ್ತದೆ!

CC-O. In Public Domain. Digitized by eGangotri

"ಆರತಿಯ ಆಯತಿ"

(ಆಯತಿ=ವಿಸ್ತಾರ–ಗಾಂಭೀರ್ಯ)

ಪ್ರತಿ ದಾರ್ಮಿಕ ಪೂಜೆಗಳೂ ವ್ರತಗಳೂ ಸಾಂಗೋಪಾಂಗವಾಗಿ ಮುಗಿದಾಗ–ದೇವರ ಉತ್ಸವದಿಗಳು ಮನೆಯ ಮುಂದೆ ಬಂದಾಗ, ಮಠಾಧಿಪತಿಗಳೂ–ದೇವರ ವಿಗ್ರಹಗಳೂ–ಉತ್ಸವಗಳೂ–ಗಣ್ಯಾತಿಗಣ್ಯರೂ ಊರಿಗೆ–ಮನೆಗೆ ಪ್ರವೇಶಿಸುವಾಗ ಗಂಡುಹೆಣ್ಣುಗಳು ದಂಪತಿಗಳು ಮತ್ತು ಮಕ್ಕಳು ಹಸೆಮಣೆಯ ಮೇಲಿಂದೇಳುವಾಗ ಇಂತಹ ವಿಶೇಷ ಸಂದರ್ಭಗಳಲ್ಲಿ ಭಕ್ತರು "ಆರತಿ"ಯೊಂದಿಗೆ ಸ್ವಾಗತಿಸುವುದು ಬಹಳ ಹಿಂದಿನಿಂದಲೂ ನಡೆದು ಬಂದಿರುವ ಸತ್ ಸಂಪ್ರದಾಯ.

'ಆರಾತಿ' ಎಂದರೆ ಹಗೆ, ಶತ್ರು. 'ಅರತಿ' ಎಂದರೆ ದುಃಖ, ಅತೃಪ್ತಿ. 'ಅರ್ತಿ' ಎಂದರೆ ಪ್ರೀತಿ–ಅಭಿಲಾಶೆ, ಮೋಜು. 'ಅರ್ಥಿ' ಎಂದರೆ ಬೇಡುವವನು, ಯಾಚಕ, ಇವು ಯಾವುವೂ ಅಲ್ಲ, ಸಂಕಟದ ವ್ಯಾಕುಲ ಭಕ್ತಿಯೇ ಆರ್ತಭಕ್ತಿ. ಈ ಭಕ್ತಿಯ ಹಿನ್ನೆಲೆಯಲ್ಲಿ ಕಷ್ಟದಿಂದ ಪಾರಾಗುವುದು ಮುಖ್ಯ! ಆರತಿಯಲ್ಲಿ ಈ ಕಾಮನೆಯಿದೆ. ಆದ್ದರಿಂದ ಇದು ಸಕಾಮಭಕ್ತಿ. ಇದು ಜ್ಯೋತಿ–ನಿರ್ಮಲಜ್ಯೋತಿ–ಪರಮಜ್ಯೋತಿ, ಪರಂಜ್ಯೋತಿ.

ಭಗವಂತನಿಗೆ ಬೆಳಗುವ ಮಂಗಳ ದೀಪಕ್ಕೆ–ಆರತಿ–ಮಂಗಳಾರತಿ–ನೀರಾಜನ–ನೀಲಾಂಜನಗಳೆಂಬ ವಿವಿಧ ಹೆಸರುಗಳುಂಟು.

'ಅಂಜನ' ಎಂದರೆ ಕಾಡಿಗೆ–ಕಜ್ಜಳ–ಕಣ್ಣಿಗೆ ಒತ್ತಿಕೊಳ್ಳುವುದು.

ಇದು ಜ್ಯೋತಿ ನಿರ್ಮಲಜ್ಯೋತಿ–ನಿರಂಜನಜ್ಯೋತಿ, ಅತಿ ತೇಜಸ್ವಿಯಾದ ರೂ, ಸಾಕ್ಷಾತ್ ಭಗವಂತನ ಪ್ರತಿರೂಪವೇ ಈ 'ಆರತೀ!' 'ಆರತಿ' ಭಗವಂತನಿಗೆ ಅವನ ಪ್ರತಿರೂಪದಲ್ಲಿರುವ ಆರಾಧ್ಯರಿಗೆ ಬೆಳಗುವ ನಿರ್ಮಲ ಜ್ಯೋತಿ, ಗೌರವೋಪಚಾರ, ಭಕ್ತಿಯ ನಿವೇದನೆ.

ದಾನ

ಕಲಿಯುಗದಲ್ಲಿ ದಾನವೇ ಶ್ರೇಷ್ಠ ಎಂದು ಪರಾಶರ ಋಷಿಗಳು ತಿಳಿಸಿದ್ದಾರೆ. ದಾನ ಕೊಟ್ಟವರ ಸಂಪತ್ತು ಎಂದಿಗೂ ಕ್ಷಯಿಸುವುದಿಲ್ಲ. ಹೃದಯ ಸಂಪತ್ತು ಅಧಿಕವಾಗುತ್ತದೆ. ದಾನವೆಂದರೆ ಗೃಹಸ್ಥನು ಗೌರವ ಪುರಸ್ಕಾರವಾಗಿ, ವಿನಯಪೂರ್ವಕವಾಗಿ ಸಲ್ಲಿಸುವ ಲೌಕಿಕ ಕೈಂಕರ್ಯ! ತನಗಿರುವ ಅಲ್ಪದಲ್ಲೇ ಪರರಿಗೆ ನೀಡಬೇಕು. ಇದಕ್ಕೆ ದಾನವೆಂದು ಹೆಸರು.

ಸತ್ಪಾತ್ರರಿಗೆ ಮಾತ್ರ ದಾನ ಕೊಡಬೇಕು. ಅಂದರೆ ವಿದ್ಯಾವಂತರಿಗೂ, ಮಂತ್ರಜ್ಞರಿಗೂ, ವೇದ ಪಾರಾಯಣ ಮಾಡುವ ಬ್ರಾಹ್ಮಣರಿಗೂ, ನಿತ್ಯಕರ್ಮಗಳಲ್ಲಿ ನಿರತರಾದವರಿಗೆ ಅಂದರೆ ಸ್ನಾನ, ಸಂಧ್ಯಾವಂದನೆ, ಜಪತಪ, ಪೂಜೆ, ಆರಾಧನೆ, ವೇದಾಧ್ಯಯನ,

Sri Vidyabharathi Book Centre, Shringeri

ಅಧ್ಯಾಪನ ಇವುಗಳಲ್ಲಿ ನಿರತರಾದವರಿಗೇ ದಾನ ಕೊಡುವುದು.
CC-0. In Public Domain. Digitized by eGangotri

ದಾನದ ಪ್ರಕ್ರಿಯೆಯಲ್ಲಿ ಆರು ಅಂಗಗಳು ಪ್ರಮುಖವಾಗಿ ಕಾಣಿಸುತ್ತವೆ. ದಾತಾ, ಪ್ರತಿಗ್ರಹಿತಾ, ಶ್ರದ್ಧಾ, ದೇಯ, ದೇಶ, ಕಾಲ. ಅಪಾತ್ರನಿಗೆ ದಾನ ಮಾಡಬಾರದೆಂದು ಎಲ್ಲಾ ಶಾಸ್ತ್ರಗಳೂ ಹೇಳುತ್ತವೆ.

'ದಾನ ಕ್ರಿಯಾ ಕೌಮುದೀ'ಯ ಪ್ರಕಾರ ತನ್ನ ಶಕ್ತಿ ಮೀರಿ ದಾನ ಮಾಡಿದರೆ ದುಷ್ಪರಿಣಾಮ ಉಂಟಾಗುತ್ತದೆ! ಒಟ್ಟು ಆದಾಯದಲ್ಲಿ ಮೂರು ಭಾಗವನ್ನು ತನ್ನ ಕುಟುಂಬ ರಕ್ಷಣೆಗಾಗಿಟ್ಟುಕೊಳ್ಳಬೇಕು. ಒಂದು ಅಥವಾ ಎರಡು ಭಾಗವನ್ನು ದಾನಕ್ಕಾಗಿ ಉಪಯೋಗಿಸಬೇಕು.

ಪರಿಸರನಾಶ ತಡೆಗೆ ಹೋಮ–ಕಡೆಯ ಆಶಾಕಿರಣ

ನಮ್ಮ ಪ್ರಾಚೀನ ದ್ರಷ್ಟಾರರು ತೋರಿಸಿಕೊಟ್ಟು ಹೋಗಿರುವ ಹೋಮ ಪದ್ಧತಿ, ಅಗ್ನಿಹೋತ್ರ ಪದ್ಧತಿ, ಇದೊಂದೇ ಈಗ ಉಳಿದಿರುವ ನಮ್ಮ ದಾರಿದೀಪ. ಕೊನೆಯ ಆಶಾಕಿರಣ.

ಪರಿಸರಮಾಲಿನ್ಯದ ಮೂಲೋಚ್ಚಾಟನೆಗಾಗಿ, ಕಲುಷಿತ ವಾತಾವರಣದಿಂದ ಆವೃತವಾಗಿರುವ ಮಾನವನ ಬಿಡುಗಡೆಗಾಗಿ, ಹಾಗೂ ಭೀಕರ ರೋಗ ರುಜಿನಗಳಿಂದ ತತ್ತರಿಸುತ್ತಿರುವ ಸಮಾಜ ಬಾಂಧವರನ್ನು ರಕ್ಷಿಸುವುದಕ್ಕಾಗಿ, ಸುಖ–ಶಾಂತಿ, ಸ್ವಾಸ್ಥ ಮನಸ್ಸು, ಸ್ವಾಸ್ಥದೇಹದ ಬುನಾದಿಗಾಗಿ–ನಿಶ್ಚಿತ, ತ್ವರಿತ ಗುರಿಸಾಧನೆಗಾಗಿ–ಹೆಚ್ಚು ಸಸ್ಯಗಳ ಬೆಳವಣಿಗೆಗಾಗಿ–ಹೆಚ್ಚು ಇಳುವರಿಗಾಗಿ–ಕೀಟಬಾಧೆಗಳ ಬಿಡುಗಡೆಗಾಗಿ–ವೃಷ್ಟಿಧಾರೆಗಾಗಿ–ಪುಷ್ಟಿ, ತುಷ್ಟಿ, ಸಂತುಷ್ಟಿಗಾಗಿ–ಸಮೃದ್ಧ ಸಮಾಜದ ಸೃಷ್ಟಿಗಾಗಿ–ಸ್ವಚ್ಛ ಉಸಿರಾಟಕ್ಕಾಗಿ–ಈಗ ಉಳಿದಿರುವ ಏಕಮಾತ್ರ ಆಸರೆ, ಬೆಳಕಿನ ಕಿಂಡಿ, ಗೌಪ್ಯ ಗವಾಕ್ಷಿ, ಆಶ್ರಯದಾತ 'ಹೋಮಾವಲಂಬನೆ'!

ಭೂಪಾಲಿನ ದೊಡ್ಡ ದುರಂತ

ಹೋಮದ ಬಗ್ಗೆ ಹೇಳುವುದಕ್ಕೆ ಮುಖ್ಯ ಕಾರಣ 1984 ರ ಡಿಸೆಂಬರ್ 3 ರಂದು ನಡೆದ 'ಭೂಪಾಲ್ ದುರಂತ' ಪರಿಣಾಮ! ಏನಾಯಿತು ಅಂತಹುದು ಅಲ್ಲಿ?

ಭೂಪಾಲಿನಲ್ಲಿ ಅಂದು 'ವಿಷಗಾಳಿ ಸೋರಿದಾಗ'(Cyanide Gas Leakage) ಎಲ್ಲೆಲ್ಲಿ ನೋಡಿದರೂ ಗುಂಪುಗುಂಪಾಗಿ ಜನ ಮರಣಿಸುತ್ತಿದ್ದರು. ಹೆಣಗಳ ರಾಶಿರಾಶಿ, ಎಲ್ಲೆಲ್ಲಿ ನೋಡಿದರೂ ಕಂದಮ್ಮಗಳ, ತಾಯಿ–ತಂದೆಯರ ಆಕ್ರಂಧನ, ಬವಣೆ, ಸಾವು, ಹೆಣಗಳ ಬಣವೆ.

ಪಾಪ! ಭೂಪಾಲಿನ ಜನತೆ ಸಾವಿನ ಸುಳಿಯಿಂದ ಇಂದೂ, ಇನ್ನೂ ಪಾರಾಗಿಲ್ಲ. ಕೈ, ಕಾಲು, ಮೂಗು, ಕಣ್ಣು ಇಲ್ಲದ ನೂರಾರು ವಿಕೃತ, ವಿಚಿತ್ರ ಮಕ್ಕಳು ಇನ್ನೂ ಜನ್ಮಿಸುತ್ತಲೇ ಇವೆ. ಇದಕ್ಕೆ ಕಾರಣವಾದ 'ಯೂನಿಯನ್ ಕಾರ್ಬೈಡ್ ಕಾರ್ಪೊರೇಷನ್' ಸಂಸ್ಥೆಯಾಗಲೀ, ಅಂದಿನ ಆ ಅಧಿಕಾರಿಗಳಾಗಲೀ ಈಗ ಇಂದು ಯಾರೂ ಇಲ್ಲ!

Sri Vidyabharathi Book Centre, Sringeri

CC-0. Mumukshu Bhawan Varanasi Collection.

ವಿಷಾನಿಲ ಸೋರಿದಾಗ ಎಲ್ಲಿಗೂ ಓಡಿಹೋಗಲು ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದ ಒಂದು ಮರಾಠದ ಸಂಸಾರ! ಮನೆಯ ಆ ವ್ಯಕ್ತಿಗೆ ಮಿಂಚಿನಂತೆ ಒಂದು ಉಪಾಯ ಹೊಳೆಯಿತು. ತನ್ನ ಕುಟುಂಬ ವರ್ಗದವರನ್ನೂ, ಆತ್ಮೀಯರನ್ನೂ ಮನೆ ಒಳಗೆ ಸೇರಿಸಿಕೊಂಡು ಕಿಟಕಿ ಬಾಗಿಲುಗನ್ನು ಭದ್ರವಾಗಿ ಹಾಕಿಕೊಂಡನು. ಹೊರಗಾಳಿ ಒಳಗೆ ನುಗ್ಗದೆಂತೆ ಮನೆಯಲ್ಲೇ ಇದ್ದ ಹಸುವಿನ ತುಪ್ಪ, ಆಕಳ ಬೆರಣಿಯಿಂದ, ಲಬ್ಧವಾಗಿದ್ದ ತುಳಸೀಕಡ್ಡಿಯಿಂದ ತನಗೆ ಬರುವ ಮಂತ್ರದಿಂದ ಶ್ರದ್ಧಾಭಕ್ತಿಯಿಂದ ಹೋಮ ಮಾಡಿದನು. ಬದುಕುಳಿಯುತ್ತೇವೆಂದಲ್ಲ, ಕೊನೆಪಕ್ಷ ದೈವೀಚಿಂತನೆಯಲ್ಲಿ ಅಂತ್ಯಕಾಲದಲ್ಲಿ ಕುಟುಂಬದವರೆಲ್ಲರೂ ಒಟ್ಟಾಗಿ ಒಂದೇ ಕಡೆ ಸಾಯೋಣವೆಂದು. ಹೀಗೆ ಇಡೀ ರಾತ್ರಿ 'ಹೋಮ' ಮಾಡಿದರು, ಭಜನೆ ಮಾಡಿದರು. ಹೊರಗಿನ ಘಟನೆ ಪೂರ್ಣವಾಗಿ ಮರೆತಿದ್ದರು. ಅತ್ತ ಹರಿಯಲೇ ಇಲ್ಲ–ಅವರ ಚಿತ್ತ. ಬೆಳಕೇ ಆಯಿತು, ಕತ್ತಲು ಹರಿಯಿತು, ಆಶ್ಚರ್ಯ, ವಿಸ್ಮಯ. ಈ ಕುಟುಂಬದವರೆಲ್ಲಾ ಸುಕ್ಷೇಮವಾಗಿ ಬದುಕುಳಿದಿದ್ದ ಸಂಗತಿ ಪ್ರಮುಖ ಪತ್ರಿಕೆಗಳ ಮುಖ ಪುಟಗಳಲ್ಲಿ ದಪ್ಪದಪ್ಪ ಅಕ್ಷರಗಳಲ್ಲಿ, 'ಭೂಪಾಲ್ ವಾರ್ತೆ'ಗಳಲ್ಲಿ ವಿಷಯವನ್ನು ಸುದ್ದಿಮಾಧ್ಯಮ ಪದೇ ಪದೇ ಬಿತ್ತರಿಸಿದವು. ವಿಶ್ವದೆಲ್ಲೆಡೆಯೂ ಅದೇ ವಾರ್ತೆ, ಅದೇ ಸುದ್ದಿ, ಅದೇ ಚರ್ಚೆ, ಅದೇ ಚಿಂತೆ, ಹೊಸಬೆಳಕನ್ನು ಕಂಡುಕೊಂಡಿದ್ದರು!

'ಹೋಮ' ನಂಬಿದರೆ, ಕ್ಷೇಮ' ಎಂದರಿತ ಆ ಕುಟುಂಬ ಬಿಡುಗಡೆಯ ನಿಟ್ಟುಸಿರು ಬಿಟ್ಟಿತು. ಭಗವಂತನಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದರು. 'ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ, ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ', ಹೃದಯ ತುಂಬಿ ಬಂದಿತ್ತು. ಹೋಮ ಅವರೆಲ್ಲರ ಪ್ರಾಣ ರಕ್ಷಿಸಿತ್ತು. ಅಷ್ಟೂ ಜನರ ಜೀವ ಉಳಿದಿತ್ತು!

ಇದರ ಪರಿಣಾಮ ಅಮೇರಿಕಾ ಮುಂತಾದ ಪಾಶ್ಚಿಮಾತ್ಯ ಮಹಾ ವಿಜ್ಞಾನ ಪರಿಷತ್ತುಗಳ ಮಹಾದಂಡೇ ಭೂಪಾಲಿನತ್ತ ದೌಡಾಯಿಸಿತು. ಈ ಎಲ್ಲಾ ವಿಸ್ಮಯವನ್ನು ಕಂಡು ಕೇಳಿ ಬೆರಗಾಯಿತು. ಅವರಲ್ಲಾ ವಿವಿಧ ರೀತಿಗಳಲ್ಲಿ ಗುಟ್ಟಾಗಿ, ಒಟ್ಟಾಗಿ ವೈಜ್ಞಾನಿಕ ಸಂಶೋಧನೆಗಳನ್ನು ಕೂಲಂಕುಶವಾಗಿ ಮಾಡಿದರು. ಫಲಿತಾಂಶ ಹೊಸ ವಿಷಯ, ಸೋಜಿಗ ಸುದ್ದಿ, ಸುವಾರ್ತೆ, ಹೊಸಬೆಳಕು, ಕರುಣೆಯ ಕಿರಣ, ಭಗವಂತನ ಕೈವಾಡ ಸ್ಪಷ್ಟವಾಗಿ ಹೊರ ಜಗತ್ತಿಗೇ ಸಾರುತ್ತಿತ್ತು.

ಆಕಳ ತುಪ್ಪ, ಆಕಳ ಬೆರಣಿ, ಕೆಲವು ನಿರ್ದಿಷ್ಟ ಸಮಿತ್ತುಗಳು. ಮಂತ್ರಪೂರ್ವಕವಾಗಿ ಶ್ರದ್ಧಾ ಭಕ್ತಿಯಿಂದ ನಂಬಿ 'ಹೋಮ' ಮಾಡಿದರೆ ಕಲುಷಿತ ವಾತಾವರಣ ಪರಿಶುದ್ಧವಾಗಿ ಪ್ರಾಣಾಪಾಯದಿಂದ ರಕ್ಷಿಸಲ್ಪಡಬಹುದು ಎಂಬ ವಿಷಯ ಬೆಳಕಿಗೆ ಬಂದಿತು. 'ಕ್ಷೇಮ'ಕ್ಕಾಗಿ 'ಹೋಮ' ಎಂಬಂಶ ಎಲ್ಲರಿಗೂ ಅರಿವಾಯಿತು. ಭಾರತದ ಹಿಂದಿನ ನಮ್ಮ ದ್ರಷ್ಟಾರರ, ಋಷಿಗಳ, ಮಂತ್ರವೇತ್ತರ ಮಹಾನ್ ಕೊಡುಗೆಯ ಬಗ್ಗೆ, ಆ 'ಮಂತ್ರಶಕ್ತಿಯ' ಬಗ್ಗೆ ಒಮ್ಮೆಯೇ ಗೌರವಾದರಗಳು ಭುಗಿಲೆದ್ದವು. ಅವರ ಬಗ್ಗೆ ಭಕ್ತಿ, ಗೌರವಾದರಗಳು

Sri Vidyabharathi Book Centre, Sringeri

ಮೂಡಿದ್ದವು. 'ಯಜ್ಞ'ವು ಜಗತ್ತಿಗೆ ಅಪಾರ ಪ್ರಮಾಣದ ಪ್ರಯೋಜನಗಳನ್ನು ತಪಸ್ಸಿನಿಂದ ಹೊಸ ಬೆಳಕು ಕಂಡವರು. ದ್ರಷ್ಟಾರರು. ಉದ್ಧರಿಸುವರು ಎಂಬ ನಂಬಿಕೆ ಜಗತ್ತಿಗೇ ಮೂಡಿಬಂದವು ಬಿಡುಗಡೆಯ ನಿಟ್ಟುಸಿರು ಬಿಟ್ಟರು.

CC-0. Jangamwadi Math Collection. Digitized by eGangotri

ಪಾಶ್ಚಿಮಾತ್ಯ ವಿಜ್ಞಾನಿಗಳು ಅರಿತ ಹೋಮದ ಪರಿಣಾಮ

1. ಜಗತ್ತನ್ನು ಉಳಿಸಲು 'ಯಜ್ಞ' ಅತ್ಯಂತ ಉಪಯುಕ್ತವಾದುದೆಂದು ಪಾಶ್ಚಿಮಾತ್ಯ ವಿಜ್ಞಾನಿಗಳು ನಂಬಿ ತಮ್ಮ ತಮ್ಮ ಸಂಶೋಧನಾ ಫಲಿತಾಂಶಗಳನ್ನು ಹೊರಗೆಡವಿದ್ದಾರೆ.
2. ಯೂರೋಪ್, ಉತ್ತರ ಮತ್ತು ದಕ್ಷಿಣ ಅಮೇರಿಕಾದ ವಿಜ್ಞಾನಿಗಳು 'ಹೋಮ'ದಿಂದಾಗುವ ಪವಾಡ ಸದೃಶ ಪರಿಣಾಮಗಳನ್ನು ಕಂಡು ಚಕಿತರಾಗಿದ್ದಾರೆ.
3. ರಾಸಾಯನಿಕ ಕ್ರಿಯೆಯು 'ಸರ್ವಭಕ್ಷಕ' ಹೋಮ ಕ್ರಿಯೆಯು 'ಸರ್ವರಕ್ಷಕ' ಎಂಬುದನ್ನು ಅಲ್ಲಿನ ವಿಜ್ಞಾನಿಗಳು ಮನಗಂಡಿದ್ದಾರೆ. ಜಗತ್ತನ್ನು ಉಳಿಸಲು 'ಹೋಮ' ಅತ್ಯಂತ ಅವಶ್ಯಕವೆಂದು ಪಾಶ್ಚಿಮಾತ್ಯ ವಿಜ್ಞಾನಿಗಳು ಸಂಶೋಧನೆಯಿಂದ ಕಂಡುಕೊಂಡಿದ್ದಾರೆ.
4. ಡೆನ್ಮಾರ್ಕ್, ಚಿಲಿ, ರಷ್ಯಾ, ಅಮೇರಿಕಾ ಮುಂತಾದವರು 'ಹೋಮ' ನಡೆಸಲು ಈಗ ಮುಂದಾಗಿವ. ಅದರಿಂದಾಗುವ ಉಪಯೋಗಗಳನ್ನು ಕಂಡುಕೊಂಡಿದ್ದಾರೆ, ಮನಗಂಡಿದ್ದಾರೆ.
5. ಹಾಲೆಂಡಿನ ವಿಜ್ಞಾನಿಗಳೂ ಕೂಡ ನಿರಂತರ 'ಹೋಮ' ಕ್ರಿಯೆ ನಡೆಸಿ ಅದರ ಪರಿಣಾಮಗಳನ್ನು ಕಂಡುಕೊಂಡಿದ್ದಾರೆ. ಪರಿಸರದ ದುಷ್ಪರಿಣಾಮಗಳ ತಡೆಗೆ 'ಹೋಮವೇ ಕ್ಷೇಮ' ಎಂಬ ಒಮ್ಮತದ ಅಭಿಪ್ರಾಯ ತಾಳಿದ್ದಾರೆ.
6. ರಷ್ಯಾದ 'ಚರ್ನೋಬಿಲ್ ದುರಂತ'ದ ದುಷ್ಫಲ ನಿವಾರಣೆಗೆ 'ಯಜ್ಞ' ಒಂದೇ ಏಕೈಕ ಮಾರ್ಗವೆಂದು ಅಲ್ಲಿನ ವಿಜ್ಞಾನಿಗಳ ಮಹಾಪರಿಷತ್ ಸುದೀರ್ಘಕಾಲೀನ ಸಂಶೋಧನೆಗಳಿಂದಾಗಿ ಒಮ್ಮತದ ತೀರ್ಮಾನಕ್ಕೆ ಬಂದಿತು.
7. ದಕ್ಷಿಣ ಅಮೇರಿಕಾದ ಚಿಲಿ ಯ ವಿಜ್ಞಾನಿಗಳು 'ಓಜೋನ್' ವಲಯ ಛಿದ್ರವಾಗಿರುವುದನ್ನೂ, ಅದರಿಂದ ತಮ್ಮ ದೇಶಕ್ಕೆ ಉಂಟಾಗುತ್ತಿರುವ ಭಾರಿ ಹಾನಿಯನ್ನೂ, ಭಯಂಕರ ಪರಿಣಾಮವನ್ನೂ ಸಂಪೂರ್ಣ ಮನವರಿಕೆ ಮಾಡಿಕೊಂಡಿದ್ದಾರೆ. ತಮ್ಮ ನೆಲದ ಮೇಲೆರಗಿ ಬಂದಿರುವ ದುಷ್ಪರಿಣಾಮಗಳನ್ನು ಎದುರಿಸುವ ಸಲುವಾಗಿಯೇ ನೂರಾರು ಎಕರೆ ಭೂಮಿಯಲ್ಲಿ ನಿರಂತರವಾಗಿ 'ಹೋಮ' ಅಳವಡಿಸಿಕೊಂಡಿದ್ದಾರೆ. ಇದರಿಂದ ಶಾಶ್ವತ ಪರಿಹಾರ ದೊರೆಯುವುದೆಂಬ ಪೂರ್ಣ ನಂಬಿಕೆ ಅವರಿಗಿದೆ! 'ಓಜೋನ್' ವಲಯ ಈಗೀಗ ಕೂಡಿಕೊಳ್ಳುತ್ತಾ ಬರುತ್ತಿರುವುದನ್ನು ವಿಜ್ಞಾನಿಗಳು ಈಗ ಗಮನಿಸುತ್ತಿದ್ದಾರೆ, ಆಶೆ ಕೈಗೂಡುತ್ತಿದೆ.
8. ಆಸ್ಟ್ರೇಲಿಯಾದಲ್ಲಿ ಅಂತಾರಾಷ್ಟ್ರೀಯ ಮಟ್ಟದ 'ಹೋಮ ಥೆರಪಿ' ಸಂಘಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri
'ಸತ್ಸಂಗ' 'ಹೋಮ' ಎಂಬ ನಿಯತಕಾಲಿಕ ಪತ್ರಿಕೆಗಳು ಪ್ರಕಟವಾಗುತ್ತಿವೆ! 'ಕೃಷಿ' ಕ್ಷೇತ್ರದಲ್ಲಿ ಮಾರ್ಗದರ್ಶನ ನೀಡುತ್ತಿವೆ!

9. ಸ್ವೀಡನ್ನಿನಲ್ಲಿಯೂ 'ಹೋಮ' ವಿಧಾನವನ್ನು ಪರೀಕ್ಷಿಸಲಾಗಿದೆ. ಮಾನಸಿಕ ಚಿಕಿತ್ಸಗಂತೂ ಇದರ ಅದ್ಭುತ ಪರಿಣಾಮ ಹಾಗೂ ಬದಲಾವಣೆ ಕಂಡುಕೊಂಡಿದ್ದಾರೆ. ಜರ್ಮನ್, ಜಪಾನ್, ವಿಜ್ಞಾನಿಗಳಂತೂ 'ಹೋಮ'ದ ಪರಿಣಾಮವನ್ನು ಚೆನ್ನಾಗಿ ಅರಿತಿದ್ದಾರೆ. 'ಓಜೋನ್' ವಲಯದಲ್ಲಿ ರಂಧ್ರ ಉಂಟಾಗಿ ಸೂರ್ಯನ 'ಅಲ್ಟ್ರಾವಯೋಲೇಟ್' ಅಪಾಯ ಕಿರಣಗಳು ನೇರವಾಗಿ ಪ್ರವೇಶಿಸಿ ಸಕಲ ಜೀವರಾಶಿಗಳ ಮೇಲೂ, ಸಸ್ಯಗಳ ಮೇಲೂ ಉಂಟಾಗಿರುವ ದುಷ್ಪರಿಣಾಮವನ್ನು ತಡೆಯಲು ಹೋಮ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.
10. ಅನ್ಯ ದೇಶಗಳ ವಿಜ್ಞಾನಿಗಳನ್ನು ಆಹ್ವಾನಿಸಿ ಸೂಕ್ತ ಪ್ರಯೋಗ–ಪರೀಕ್ಷೆಗಳನ್ನು ನಡೆಸಿದ್ದಾರೆ. ಇದರ ಪರಿಣಾಮವಾಗಿ 'ಯಜ್ಞದ ಮೇಲೆ ವಿಜ್ಞಾನ' (HOMA THERAPY) ಎಂಬ ರೋಗ ನಿವಾರಣಾಶಾಸ್ತ್ರ ಹೊಸದಾಗಿ ಈಗ ಹುಟ್ಟಿಕೊಂಡಿದೆ.
11. ಪಶ್ಚಿಮ ವರ್ಜೀನಿಯದ ವಿಶಾಲವಾದ ಅರಣ್ಯ ಪ್ರದೇಶವೊಂದರಲ್ಲಿ ಪರಿಶುದ್ಧ ಹಸುವಿನ ತುಪ್ಪವನ್ನು ಬಳಸಿ ಪಿರಮಿಡ್ ಆಕಾರದ ತಾಮ್ರದ ಕುಂಡದ ಮೂಲಕ 'ಹೋಮ' ನಿರಂತರವಾಗಿ ಜರುಗುವ ವ್ಯವಸ್ಥೆ ಮಾಡಲಾಗಿದೆ! ಪರಿಣಾಮವಾಗಿ ಉತ್ತಮ ಫಲಿತಾಂಶ ಕಂಡುಕೊಂಡಿದ್ದಾರೆ, 'ಹೋಮ ಧೂಮ'ವು ಕಲುಷಿತ ವಾತಾವರಣವನ್ನು ಶುದ್ಧಿಮಾಡುತ್ತದೆ. ಅತ್ಯವಸರ ಹಾಗೂ ಅಪಾಯ ಪರಿಸ್ಥಿತಿಯಲ್ಲಿ ಅದು ಮನುಷ್ಯನನ್ನು ರಕ್ಷಿಸಬಲ್ಲದು ಎಂಬಂಶವನ್ನು ಎಲ್ಲರೂ ಈಗ ಮನಗಂಡಿದ್ದಾರೆ.
12. ಹೀಗೆ ಪಾಶ್ವಿಮಾತ್ಯದೇಶಗಳಲ್ಲಿ ನಮ್ಮ 'ಅಗ್ನಿಹೋತ್ರ' ಆಚರಣೆಯ ಬಗ್ಗೆ ವಿದೇಶಿಯರು ತುಂಬಾ ಆಸಕ್ತರಾಗಿದ್ದಾರೆ. ತರಬೇತಿಯ ಶಿಬಿರಗಳು, ತರಗತಿಗಳು ನಡೆಯುತ್ತಿವೆ! 'ಹೋಮ ಪದ್ಧತಿಯನ್ನು ಕೃಷಿಕ್ಷೇತ್ರದಲ್ಲಿ ಅಳವಡಿಸಿ ಕೊಂಡಿರುವವರನ್ನು ಗುರುತಿಸಿ 'ಪ್ರಮಾಣಪತ್ರ'ಗಳನ್ನು ವಿತರಿಸಲಾಗುತ್ತಿದೆ.

ಈಗ 'ಹೋಮ' ಪ್ರಯೋಗದ ಉಪಯೋಗ ಈಗ ಬೆಳಕಿಗೆ ಬರುತ್ತಿದೆ. ಇದರ ಬಳಕೆ, ಆಚರಣೆ, ಅನುಷ್ಠಾನ ಕ್ರಮಗಳು ಎಲ್ಲರಿಗೂ ಮನದಟ್ಟಾಗಿ, ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ.

ವಿಪರ್ಯಾಸ

'ವಿಪರ್ಯಾಸ'ವೇನೆಂದರೆ ಯಜ್ಞಗಳ ಆಚರಣೆ, ಅವುಗಳ ಉದ್ಭವ, ಅವುಗಳ ಉಗಮ, ಅವುಗಳ ಒಳಹರಿವು, ಇರುವು, ಅಂತರ್ಜಲ, ಪಾತಾಳ ಗಂಗೆ, ಅವುಗಳ ಒಳಸುಳಿ, ಅವುಗಳ ಮೂಲಹುಟ್ಟು, ಆ ಜೀವನಾಡಿಯ ಬುನಾದಿ, ಅದರ ತಲಪರಿಗೆ ನೆಲೆಯಾಗಿ ನಿಂತಿರುವುದು 'ಭಾರತದಲ್ಲಿ'! ಆದರೆ ಅವುಗಳ ಪ್ರಯೋಗ, ಉಪಯೋಗ,

ಬಳಕೆ, ಸಾರ್ಥಕತೆ, ಉತ್ಸಾಹ ಕಾಣುತ್ತಿರುವುದು ಪಾಶ್ಚಿಮಾತ್ಯ ದೇಶಗಳಲ್ಲಿ! ಏನಿದು ವಿಪರ್ಯಾಸ?
CC-O. In Public Domain. Digitized by eGangotri

ಜಗತ್ತನ್ನುಳಿಸಲು, ಬೆಳೆಸಲು 'ಯಜ್ಞ' ಒಂದೇ ಈಗ ಉಳಿದಿರುವ ಆಸರೆ ಎಂದು ಪಾಶ್ಚಮಾತ್ಯ ವಿಜ್ಞಾನಿಗಳು ತಮ್ಮ ಸಂಶೋಧನಾ ಫಲಿತಾಂಶದ ಮೂಲಕ ಕಂಡುಕೊಂಡಿದ್ದಾರೆ. ಯಜ್ಞ–ಯಾಗಾದಿಗಳಲ್ಲಿ ಬಳಸುವ ಪೂರ್ಣ ಪರಕರಗಳನ್ನು ಪರೀಕ್ಷಿಸಿದ್ದಾರೆ, ವಿಶ್ಲೇಶಿಸಿದ್ದಾರೆ.

1. ತಾಮ್ರದ ಪಾತ್ರೆಗಳಿಂದ ಬಿಡುಗಡೆಯಾಗುವ ವಿಶಿಷ್ಟ ಅಣುಗಳು ರೋಗ ವಿನಾಶಕವೆಂದು ಖಚಿತಪಡಿಸಿಕೊಂಡಿದ್ದಾರೆ.
2. ಹಸುವಿನ ಬೆರಣಿಯಲ್ಲಿರುವ ವನಸ್ಪತಿಯುಕ್ತ ಸತ್ವಗಳು ಆರೋಗ್ಯ ರಕ್ಷಣೆಗೆ ಸಹಕಾರಿಯೆಂದು ಖಚಿತಪಡಿಸಿಕೊಂಡಿದ್ದಾರೆ.
3. ಮಂತ್ರಪೂರ್ವಕವಾಗಿ ಸಮರ್ಪಿಸುವ 'ಕೆಂಪುಮಂತ್ರಾಕ್ಷತೆ'–ಗರಿಕೆ–ಸಮಿತ್ತುಗಳು ಉರಿಯ ತೊಡಗಿದಂತೆ ವಾತಾವರಣದಲ್ಲಿ ಉಂಟಾಗುವ, ಬಿಡುಗಡೆಯಾಗುವ ಬದಲಾವಣೆ 'ವಿಸ್ಮಯ' ಸೋಜಿಗ, ಅವು ಕಣ್ಣಿಗೆ ಕಾಣುವುದಿಲ್ಲ. ಆದರೆ 'ಜ್ಞಾನದ–ವಿಜ್ಞಾನದ ವಿಶಿಷ್ಟ ಚಕ್ಷುಗಳು ಈ ಧನಾತ್ಮಕ ಬದಲಾವಣೆಗಳನ್ನು ಗುರುತಿಸಿವೆ, ಕಂಡುಕೊಂಡಿವೆ, 'ಹೋಮ' ಲಾಜಿಕ್ಕಲ್ಲ, ಇದು 'ಮ್ಯಾಜಿಕ್' ಎಂದು ನಂಬಿದ್ದಾರೆ. 'ಮ್ಯಾಜಿಕ್'ನಿಂದ ಉತ್ಪತ್ತಿಯಾದ ವಸ್ತುಗಳು ಕೃತಕ. ಮಾಯೆ, ತಮ್ಮ ಅಸ್ತಿತ್ವವನ್ನು ಅವು ಬೇಗನೆ ಕಳೆದುಕೊಳ್ಳುತ್ತವೆ, ಆದರೆ ಹೋಮೋತ್ಪನ್ನಗಳ ಪರಿಣಾಮ ಶಾಶ್ವತ, ನಿರಂತರ , ಭಗವಂತನಿಂದ ಬಂದ ಬಳುವಳಿ.
4. ಹೋಮಾಗ್ನಿಯಿಂದ ಹೊರಡುವ ಔಷಧೀಯ ಗುಣಯುಕ್ತವಾದ ಆ 'ಧೂಮ' ಗಾಳಿಯೊಂದಿಗೆ ಸಮ್ಮಿಳಿತವಾಗಿ ಪರಿಸರದಲ್ಲಿ ಹರಡಿದಾಗ ಉಂಟಾಗುವ ಲಾಭಗಳು ಹಲವಾರು, ವಿಜ್ಞಾನಿಗಳು ಅವುಗಳನ್ನು ಗುರುತಿಸಿದ್ದಾರೆ.

ಕಾಲಕ್ಕೆ ಬೆಲೆಯಿದೆ. ಸಮಯಕ್ಕೆ ಸರಿಯಾಗಿ ಮುಹೂರ್ತ ಸಾಧಿಸಬೇಕು. ಹೆಚ್ಚು ಕಮ್ಮಿಯಾಗಬಾರದು. ಅದೇ ನೈಸರ್ಗಿಕ ಕಾಲಚಕ್ರಗಳ ಸಮಯ. ಭೂಮಿಯ ವಾತಾವರಣದ ಮೇಲೆ ಸೌರಕಿರಣಗಳು ಮಹತ್ವಪೂರ್ಣ ಬದಲಾವಣೆಯನ್ನುಂಟುಮಾಡುವ ಸಮಯ, ಹಗಲೂ ಅಲ್ಲದ, ರಾತ್ರಿಯೂ ಅಲ್ಲದ, ಪ್ರಕಾಶವೂ ಅಲ್ಲದ, ಕತ್ತಲೆಯೂ ಅಲ್ಲದ ಮಹತ್ವಪೂರ್ಣ ನೈಸರ್ಗಿಕ ಬದಲಾವಣೆಗಳಾಗುವ ಸುಸಮಯ. ಆ ಸಮಯವನ್ನೇ 'ಹೋಮಕಾಲವೆಂದು ಖಚಿತಮಾಡಿಕೊಂಡಿರಬೇಕು. ಅವೇ 'ಸಂಧಿಕಾಲಗಳು', ಅವೇ ಹೋಮದ ಸೂಕ್ತ ಸಮಯ ಇವು ಏಕಾಗ್ರತೆಯನ್ನುಂಟುಮಾಡುವ ಸು–ಸಮಯ. ತೇಜಸ್ಸಿನ ಸೂಕ್ಷ್ಮಾತಿಸೂಕ್ಷ್ಮ ತರಂಗಗಳು ಪ್ರವಹಿಸುವ ಸು–ಸಮಯ.

ಕೃಷಿ–ಅಗ್ನಿಹೋತ್ರಕ್ಕಾಗಿ ಚಿಕ್ಕ ಚಿಕ್ಕ ತಾಮ್ರದ ಕುಂಡಗಳನ್ನೇ ಉಪಯೋಗಿಸಬಹುದು. ತಾಮ್ರ ಅತ್ಯುತ್ತಮ ವಾಹಕ. ರೋಗಾಣುಗಳನ್ನೂ ಮತ್ತು ಅವುಗಳ ಬೆಳವಣಿಗೆಯನ್ನೂ
Sri Vidyabharathi Book Centre, Sringeri

CC-0. Prof. Satya Vrat Shastri Collection. Digitized by eGangotri
ತಡೆಯುವ ಹಾಗೂ ಪ್ರತಿಬಿಂಬಿಸುವ ಅತ್ಯದ್ಭುತ ಶಕ್ತಿ ಅದರಲ್ಲಿದೆ. ಈಗೀಗ ಇವು ಕೂಡ ಎಲ್ಲಾ ಪಟ್ಟಣಗಳಲ್ಲಿಯೂ ದೊರೆಯುತ್ತಿದೆ. ಹೇಳಿಮಾಡಿಸಿಕೊಂಡರೂ ಸರಿಯೆ. ಒಟ್ಟಿನಲ್ಲಿ ತಾಮ್ರದ ಕುಂಡಗಳೇ ಆದರೆ ಹೆಚ್ಚು ಪರಿಣಾಮ ಬೀರುತ್ತದೆ.

ಅಜ್ಯ

ಅಜ್ಯವೆಂದರೆ ಹಸುವಿನ ತುಪ್ಪವೇ ಆಗಬೇಕು. ಅದರಲ್ಲೂ ನಾಟಿ ಹಸುವಿನ ತುಪ್ಪವಾದರೆ ಇನ್ನೂ ಹೆಚ್ಚು ಪರಿಣಾಮ ಕಾಣಬಹುದಾಗಿದೆ. ಆಕಳ ತುಪ್ಪದಲ್ಲಿ ಔಷಧಿ ಗುಣಗಳಿವೆ. ಅಗ್ನಿಗೆ ಅರ್ಪಿಸಿದಾಗ ಸೂಕ್ಷ್ಮ ತರಂಗಗಳ ರೂಪದಲ್ಲಿ ವಾತಾವರಣದಲ್ಲಿ ವೇಗವಾಗಿ ಪಸರಿಸುತ್ತದೆ. ಇದರಿಂದಾಗಿ ವಾತಾವರಣವು ತ್ವರಿತಗತಿಯಲ್ಲಿ ಪರಿಶುದ್ಧಿ ಹೊಂದುತ್ತದೆ. ಹಸುವಿನ ಹಾಲೇ ಶ್ರೇಷ್ಠ. ಅದರ ಬೆಣ್ಣೆ ಸ್ವಲ್ಪ ಹಳದಿ ಬಣ್ಣದ್ದಾಗಿರುತ್ತದೆ. ಇತರೆ ಬೆಣ್ಣೆಯ ಬಣ್ಣ ಬಿಳಿಯಾಗಿರುತ್ತದೆ. ಹಸುವಿನ ತುಪ್ಪವನ್ನು ಕಾಯಿಸಿದಾಗ ಸುವಾಸನೆ ಬರುತ್ತದೆ.

ಆಕಳ ಬೆರಣಿ :

ಆಕಳ ಸಗಣಿಯನ್ನೇ ಬೆರಣಿಯನ್ನಾಗಿ ತಟ್ಟಿ ಬಿಸಿಲಿನಲ್ಲಿ ಒಣಗಿಸಿಟ್ಟುಕೊಂಡಿರಬೇಕು. ಬೆರಣಿ ತೆಳುವಾಗಿದ್ದರೆ ಜಾಗ್ರತೆ ಹತ್ತಿಸಲು ಅನುಕೂಲವಾಗುತ್ತದೆ. ಹಸುವಿನ ಬೆರಣಿಯಲ್ಲಿ ಔಷಧಿ ಗುಣವಿದೆ. ಕೀಟಾಣುಗಳ ಕಾಟವಿರುವುದಿಲ್ಲ. ಆಕಳ ಭಸ್ಮದ ವಿಭೂತಿ ಬಹಳ ಶ್ರೇಷ್ಠ ! "ಸರ್ವಜ್ಞ"ನೂ ತನ್ನ ಪದ್ಯಗಳಲ್ಲಿ ಹಸುವನ್ನು ಸ್ಮರಿಸಿಕೊಂಡು, ಅದನ್ನು ಮಾಧ್ಯಮ ಮಾಡಿಕೊಂಡು ಅಡಕ ಉಪಯೋಗಗಳನ್ನೇ ಒಂದು ಪಟ್ಟಿ ಮಾಡಿದ್ದಾನೆ. "ನೀನಾರಿಗಾದೆಯೋ ಎಲೆ ಮಾನವ?" ಎಂದು ಮನುಷ್ಯ ಕುಲಕ್ಕೇ ಗೋವು ಒಂದು ದೊಡ್ಡ ಸವಾಲು ಹಾಕಿರುವುದಂತೂ ಸರಿಯಾಗಿದೆ. ಎಲ್ಲರಿಗೂ ಇದು ಅರಿವಾಗಬೇಕಾದ ವಿಷಯವೇ! ತಿಳಿಯಬೇಕಾದ ವಿಷಯವೇ ಆಗಿದೆ. ಬುದ್ಧಿವಾದ ಹೇಳಲು ಹಸುವಾದರೇನು ? ಕರುವಾದರೇನು ? ಮಗುವಾದರೇನು ?

ಅಕ್ಕಿಕಾಳು :

ಭತ್ತದ ಮೇಲಿನ ಹೊಟ್ಟು (ಸಿಪ್ಪೆ) ಮಾತ್ರ ತೆಗೆದಿರಬೇಕು. ಇಡಿಯಾಗಿರುವ ಕೆಂಪು ಕಾಳನ್ನೇ ಉಪಯೋಗಿಸುವುದಂತೂ ಕಡ್ಡಾಯ. ಪಾಲೀಶ್ ಮಾಡಿದ ಅಥವಾ ನುಚ್ಚಾಗಿರುವ ಅಕ್ಕಿಯನ್ನು ಉಪಯೋಗಿಸಬಾರದು. ಅದರಲ್ಲೂ ಸಾವಯವ ಕೃಷಿಯಿಂದ ಬೆಳೆದ ಭತ್ತದ ಅಕ್ಕಿಯಂತೂ ಬಹಳ ಉತ್ಕೃಷ್ಟವಾದುದು. ಅದರಲ್ಲಿನ ಶಕ್ತಿ ಮತ್ತು ಸತ್ವ ಭಗ್ನವಾಗಬಾರದು.

ಅಗ್ನಿಯನ್ನು ಸಿದ್ಧಪಡಿಸುವ ಕ್ರಮ :

ಒಣಗಿದ ಬೆರಣಿಯ ತುಂಡೊಂದನ್ನು ಕುಂಡದಲ್ಲಿಟ್ಟು "ಜ್ವಾಲೆ" ಸರಾಗವಾಗಿ ಹರಡಿಕೊಳ್ಳುವಂತೆಯೂ, ಗಾಳಿ ಸರಾಗವಾಗಿ ಚಲಿಸುವಂತೆಯೂ ಜೋಡಿಸಿರಬೇಕು.

Sri Vidyabharathi Book Centre, Sringeri

CC-0. Panini Kanya Maha Vidyalaya Collection. Digitized by eGangotri

ಬೆರಣಿ ತುಂಡೊಂದಕ್ಕೆ ಸ್ವಲ್ಪ ತುಪ್ಪವನ್ನು ಹಾಕಿ ಬೆಳಿಸಿ ಉರಿಸಬೇಕು. ಜೋಡಿಸಿದ ಬೆರಣಿಗಳ ಮಧ್ಯೆ "ಉರಿ"ಯನ್ನಿಟ್ಟು ಕೈಬೀಸಣಿಗೆಯಿಂದ ಮೃದುವಾಗಿ ಬೀಸಿದರೆ ಅಗ್ನಿಯು ಸ್ಫುಟಗೊಂಡು ಸಿದ್ಧವಾಗುವುದು.

ಕರ್ಪೂರ, ಊದುಬತ್ತಿ ಅಥವಾ ಬೇರೆ ಯಾವ ದಾಹಕ ತೈಲಗಳನ್ನಾಗಲೀ, ಪೂರಕ ವಸ್ತುಗಳನ್ನಾಗಲೀ ಉಪಯೋಗಿಸಲೇಬಾರದು. ಕರ್ಪೂರ, ಊದುಬತ್ತಿ ಏಕೆ ಬೇಡವೆಂದರೆ ಅವುಗಳೂ ಕೂಡ ಈಗೀಗ ರಾಸಾಯನಿಕ ವಸ್ತುಗಳಿಂದಲೇ ತಯಾರಾಗುತ್ತಿವೆ. ಕೇವಲ ಆಕಳ ಶುದ್ಧ ತುಪ್ಪವನ್ನು ಮಾತ್ರ ಉಪಯೋಗಿಸದರೆ ಸಾಕು. ಹತ್ತಿಯಿಂದ ಮಾಡಿದ ಬತ್ತಿಯನ್ನು ಉಪಯೋಗಿಬಹುದು.

ಇವನ್ನು ಸೂರ್ಯೋದಯ–ಸೂರ್ಯಾಸ್ತಮಾನದ ಕೆಲವು ನಿಮಿಷಗಳ ಮುಂಚೆ ಅಗ್ನಿಯನ್ನು ಸಿದ್ಧಮಾಡಿಕೊಂಡಿರಬೇಕು.

ಹೋಮ ಮಾಡುವ ಸ್ಥಳ :

ಕೃಷಿಯ ಪ್ರಗತಿಗಾಗಿ, ಅದರ ಉದ್ದೇಶಕ್ಕಾಗಿ ನಡೆಸುವ "ಹೋಮ" ಇದಾಗಿರುವುದರಿಂದ ಕೃಷಿ ಕ್ಷೇತ್ರದ ಮಧ್ಯಭಾಗದಲ್ಲಿಯೇ ನೆರವೇರಿಸಬೇಕು.

'ಕೃಷಿ' ಕ್ಷೇತ್ರದ ವಿಸ್ತೀರ್ಣ ಅತ್ಯಧಿಕವಾಗಿದ್ದರೆ, ಅದರ ನಾಲ್ಕೂ ಮೂಲೆಗಳಲ್ಲಿ "ಹೋಮಕುಂಡ"ಗಳನ್ನು ಸ್ಥಾಪಿಸುವುದೇ ಉತ್ತಮ. ಆದರೆ ಆ ಸ್ಥಳಗಳು ಸ್ವಲ್ಪ ಎತ್ತರ ಪ್ರದೇಶದಲ್ಲಿದ್ದು ಸಮತಟ್ಟಾಗಿರಬೇಕು. ಶುದ್ಧ ವಾತಾವರಣದಲ್ಲಿ ಯಾರೂ ತುಳಿದಾಡದ ಸ್ಥಳವನ್ನೇ ಆರಿಸಿ ಸಿದ್ಧ ಮಾಡಿಕೊಂಡಿರಬೇಕು. ಅಂತಹ ಜಾಗವನ್ನು ಗುಡಿಸಿ, ಸಾರಿಸಿ, ರಂಗವಲ್ಲಿ ಇತ್ಯಾದಿಗಳಿಂದ ಸಿಂಗರಿಟ್ಟುಕೊಂಡಿರಬೇಕು.

ತೋಟಗಳಲ್ಲಿರುವ ಕುಟೀರಗಳಲ್ಲಿ ಈ ಹೋಮ ಕಾರ್ಯಗಳನ್ನು ನಿರ್ವಹಿಸುವುದು ಬಹಳ ಸೂಕ್ತವಾದುದು. ಆದರೆ ಗಾಳಿ–ಬೆಳಕು ಸರಾಗವಾಗಿ ಸಂಚರಿಸುತ್ತಿರಬೇಕಾದುದು ಅತ್ಯಾವಶ್ಯಕ.

ಸೂರ್ಯನ ಕಿರಣಗಳಲ್ಲಿ ಔಷಧಿ ಗುಣಗಳಿವೆ. ನಮ್ಮ ತ್ವಚೆಯ ಮೇಲೆ ಸೇರಿಕೊಂಡಿರುವ 'ಶಿಲೀಂಧ್ರ' ಮತ್ತು 'ಬ್ಯಾಕ್ಟೀರಿಯಾ'ಗಳನ್ನು ಸೂರ್ಯನ ಕಿರಣಗಳು ಕೊಲ್ಲುತ್ತವೆ. ಆ ಕಿರಣಗಳು ನಮ್ಮ ಬಿಳಿರಕ್ತಕಣಗಳನ್ನು ಮತ್ತಷ್ಟು ಚುರುಕುಗೊಳಿಸುತ್ತವೆ. ನಮ್ಮ ತ್ವಚೆಯಲ್ಲಿ "ಎರ್ಗೋಸ್ಟರಾಲ್" ಎಂಬ ಪದಾರ್ಥವಿದೆ. ನಮ್ಮ ಮೈಮೇಲೆ ಬೀಳುವ ಸೂರ್ಯನ ಸೂಕ್ಷ್ಮ ಕಿರಣಗಳು ಈ ಪದಾರ್ಥವನ್ನು "ಡಿ" ಅನ್ನಾಂಗವನ್ನಾಗಿ ಪರಿವರ್ತಿಸುತ್ತವೆ. ಈ ಅನ್ನಾಂಗ ನಮ್ಮ ಎಲುಬುಗಳ ಬೆಳವಣಿಗೆಗಳಿಗೆ ತುಂಬಾ ಉಪಯುಕ್ತವಾದವು. ಇದು ಪ್ರಕೃತಿ ಚಿಕಿತ್ಸೆ ! :

ನಮ್ಮ ಶರೀರದ ಮೇಲೆ ಬಿಸಿಲು ಬಿದ್ದಾಗ ರಕ್ತದೊಂದಿಗೆ ಕೆಲವು ಸೂಕ್ಷ್ಮ ಪದಾರ್ಥಗಳೂ ಸೇರಿಕೊಂಡು ನಮ್ಮ ಅಂಗಾಂಗಗಳನ್ನು ಮುಟ್ಟಿ ಪುಳಕಗೊಳಿಸುತ್ತವೆ.

Sri Vidyabharathi Book Centre, Sringeri

ಇದರಿಂದ ಆರೋಗ್ಯ ವೃದ್ಧಿಯಾಗುತ್ತದೆ. ಶ್ರಮವಹಿಸಿ ಕೆಲಸ ಮಾಡಲು ಸಹಕರಿಸುತ್ತವೆ.
CC-0. In Public Domain. Digitized by eGangotri

ಪಾಶ್ಚಿಮಾತ್ಯ ದೇಶದಲ್ಲಂತೂ "ಸೂರ್ಯನ ಕಿರಣ ಸ್ನಾನ" ಮಾಡಲು ಹೆಂಗಸರೂ ಮತ್ತು ಮಕ್ಕಳೂ ಸಮುದ್ರ ದಂಡೆಗೆ ಹೋಗುತ್ತಾರೆ. ಮರಳಿನ ಮೇಲೆ ಬಹಳ ಹೊತ್ತು ಆಡಿ ಮಲಗಿ ಸೂರ್ಯನ ಕಿರಣಗಳಿಗೆ ಮೈ ಒಡ್ಡುತ್ತಾರೆ. ಆರೋಗ್ಯ ಸುಧಾರಿಸಲು ಇದು ಒಳ್ಳೆಯ ಕ್ರಮ. ಅದಕ್ಕಾಗಿಯೇ ನಮ್ಮ "ದೀರ್ಘದಂಡ ಸೂರ್ಯನಮಸ್ಕಾರ ಪದ್ಧತಿ" ಲೋಕವಿಖ್ಯಾತವಾಗಿರುವುದು, "ಗಿನ್ನಿಸ್"ಗೂ ದಾಖಲಾಗಿರುವುದು !

ಹೋಮ ಮಾಡುವವರು ಯಾರು ?

ಜಮೀನಿನ ಮಾಲೀಕರೇ ತಮ್ಮ ಮಕ್ಕಳ, ಕುಟುಂಬ ವರ್ಗದವರ ಸಹಕಾರದಿಂದ ಪ್ರತಿನಿತ್ಯವೂ ನಿಗದಿಯಾದ ಸಮಯದಲ್ಲಿ ಜಿತೇಂದ್ರಿಯರಾಗಿ ಕುಳಿತು ಹೋಮ ಮಾಡಬೇಕು. ಇದೊಂದು ನಿತ್ಯ ಕಾಯಕ.

ಅಥವಾ ತಮ್ಮ ಕೃಷಿ ಕಾರ್ಮಿಕರೇ ಕುಳಿತು ನಿತ್ಯ ಹೋಮ ಮಾಡಬಹುದು. ಒಬ್ಬರೇ ಮಾಡಬೇಕೆಂದೇನೂ ಇಲ್ಲ. ಸಾಮೂಹಿಕವಾಗಿ ಕುಳಿತು "ಹೋಮ" ಮಾಡಬಹುದು. ಇದಕ್ಕೆ ಯಾವ ಪುರೋಹಿತರ ಆಶ್ರಯವೂ, ಅಗತ್ಯವೂ, ಖರ್ಚುವೆಚ್ಚಗಳೂ ಇರುವುದಿಲ್ಲ. ಇದಕ್ಕೆ ಬೇಕಾಗಿರುವುದ ಶ್ರದ್ಧೆ, ಉತ್ಸಾಹ, ದೃಢ ನಂಬಿಕೆ, ಶಿಸ್ತು ಮತ್ತು ಸಮಯ ಪ್ರಜ್ಞೆ, ಸಂಯಮ !

ನಿತ್ಯವೂ ಸೂರ್ಯೋದಯ, ಸೂರ್ಯಾಸ್ತಗಳ ಸಮಯದಲ್ಲೇ ಸಾಧಿಸುವ ದೃಢ ಸಂಕಲ್ಪ, ಛಲ, ಶ್ರದ್ಧೆಯ ಪರಿಪಾಲನೆ ಸಾಕು !

ಯಾವ ಮಂತ್ರಗಳನ್ನು ಹೇಳಬೇಕು ?

ಮಂತ್ರಗಳ ಸ್ಪಷ್ಟ ಉಚ್ಚಾರಣೆಯಾಗಬೇಕು. ಮಂತ್ರಗಳನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡು ಚೆನ್ನಾಗಿ ಅಭ್ಯಾಸ ಮಾಡಿಕೊಂಡಿರಬೇಕು. ಕೆಲಸ ಮಾಡುತ್ತಲೇ ಅಭ್ಯಾಸ ಮಾಡಿಕೊಳ್ಳಬಹುದು. ಆದರೆ ತಪ್ಪು ಉಚ್ಚರಿಸಬಾರದು. ಬಂದವರು ಬಾರದಿದ್ದವರಿಗೆ ಅಥವಾ ಹೊಸಬರಿಗೆ ಹೇಳಿಸಿ, ಸರಿಯಾಗಿ ತಿದ್ದಿಸಿ ತಯಾರು ಮಾಡಿರಬೇಕು. ಶುದ್ಧ ಮನಸ್ಕರಾಗಿರಬೇಕು.

"ಸೂರ್ಯ ಉದಯ" ಕಾಲಕ್ಕೆ ಸರಿಯಾಗಿ ಹೇಳಬೇಕಾಗಿರುವ ಎರಡು ಮಂತ್ರಗಳಿವು :

1) **"ಸೂರ್ಯಾಯ ಸ್ವಾಹಾಃ ।**
ಸೂರ್ಯಾಂಯೇದಂ ನಮಮ ॥"

2) "ಪ್ರಜಾಪತೆಯೇ ಸ್ವಾಹಾ ।
ಪ್ರಜಾಪತಯ ಇದಂ ನಮಮ ॥"

CC-O. In Public Domain. Digitized by eGangotri

"ಸೂರ್ಯಾಸ್ತ" ಸಮಯಕ್ಕೆ ಸರಿಯಾಗಿ ಹೇಳಬೇಕಾಗಿರುವ ಎರಡು ಮಂತ್ರಗಳಿವು.

1) "ಅಗ್ನಿಯೇ ಸ್ವಾಹಾ ।
ಅಗ್ನಯ ಇದಂ ನಮಮ ॥"

2) "ಪ್ರಜಾಪತೆಯೇ ಸ್ವಾಹಾ ।
ಪ್ರಜಾಪತಯ ಇದಂ ನಮಮ ॥"

ಸೂಚನೆ :– "ಸ್ವಾಹಾ" ಎಂಬ ಉಚ್ಚಾರದೊಂದಿಗೇ ತುಪ್ಪ ಮಿಶ್ರಿತ ಅಕ್ಕಿಕಾಳುಗಳನ್ನೂ, ಒಂದೊಂದು ಚಮಚ ಶುದ್ಧ ತುಪ್ಪವನ್ನೂ 'ಆಹುತಿ'ಯಾಗಿ ಅಗ್ನಿಗೆ ಅರ್ಪಿಸುತ್ತಿರಬೇಕು. ಮೂರು ಬೆರಳಿನಲ್ಲಿ ಪಡೆಯುವಷ್ಟು ಶುದ್ಧ ಕೆಂಪು ಅಕ್ಕಿಯನ್ನು ಮಾತ್ರ ಉಪಯೋಗಿಸಬೇಕು. ಹಿಡಿ ಹಿಡಿಯಾಗಿ ಅಕ್ಕಿಕಾಳುಗಳನ್ನು ತುಂಬಿಕೊಂಡು ಹೋಮ ಮಾಡಬಾರದು. ಮಂತ್ರಗಳನ್ನು ಪ್ರಾಸಬದ್ಧವಾಗಿ ಜೋರಾಗಿ ಉಚ್ಚರಿಸಬೇಕು.

ಎಷ್ಟು ಹೊತ್ತು ಹೋಮ ಮಾಡಬೇಕು ?

ಎರಡು ಮೂರು ಗಂಟೆಗಳಾದರೂ ಮಾಡಬೇಕು. ಹೊರಗಡೆ ಹೋಗಲೇ ಬೇಕಾದರೆ ಬೇರೆಯವರಿಗೆ ಜಾಗ ಬಿಟ್ಟುಕೊಡಬೇಕು. ಅವರು ಮುಂದುವರಿಸುತ್ತಾರೆ. ಹೀಗೆ ಯಾರು ಬೇಕಾದರೂ ಎಷ್ಟು ಹೊತ್ತಾದರೂ ಸರಿಯೆ ಸ್ಪಷ್ಟ ಉಚ್ಚಾರದೊಂದಿಗೆ 'ಹೋಮ' ಜರುಗುತ್ತಿರಬೇಕು.

ಫಲಿತಾಂಶ :

ಹೋಮಾನುಷ್ಠಾನ ನಿರಂತರವಾಗಿ ನಡೆದ ಕೆಲವು ದಿನಗಳಾದ ನಂತರ ಕೀಟಗಳೂ, ಪಕ್ಷಿಗಳೂ ವೃದ್ಧಿಂಯಾಗುವುದನ್ನೂ, ಅವುಗಳ ಕಂಠ ಮಧುರವಾಗುತ್ತಿರುವುದನ್ನೂ, 'ಚಿಲಿಪಿಲಿ' ಗುಟ್ಟುವುದನ್ನೂ, ಎತ್ತರಕ್ಕೆ ಸಂತೋಷವಾಗಿ ಹಾರುವುದನ್ನೂ, ಚಟುವಟಿಕೆಯಿಂದ ಓಡಾಡುವುದನ್ನೂ ಕಾಲಕ್ರಮೇಣ ನಾವು ಕಂಡುಕೊಳ್ಳಬಹುದಾಗಿದೆ. ಇದು ಹೋಮ ಮಂತ್ರಗಳ ಪರಿಣಾಮ.

ಹಾಗೆಯೇ ಪೈರುಗಳು ಸ್ವಲ್ಪ ಸಮಯದಲ್ಲಿಯೇ ಮೊಳಕೆ ಒಡೆಯುತ್ತಿರುವುದನ್ನೂ,

CC-O. In Public Domain. Digitized by eGangotri
ಚೆನ್ನಾಗಿ ಚಿಗುರಿ ಉಲ್ಲಾಸದಿಂದ ಓಲಾಡುತ್ತಿರುವುದನ್ನೂ ಗಮನಿಸಬಹುದಾಗಿದೆ. ವಿಶೇಷ ದಿನಗಳಲ್ಲಿ ಅಂದರೆ ಹಬ್ಬ–ಹರಿದಿನಗಳಲ್ಲಿ, ಅಮಾವಾಸ್ಯೆ, ಹುಣ್ಣಿಮೆ, ಯುಗಾದಿ, ಸಂಕ್ರಾಂತಿ, ಗಣೇಶ ಚೌತಿ ಮುಂತಾದ ಪರ್ವ ದಿನಗಳಲ್ಲಿ ಸಾಮೂಹಿಕವಾಗಿ ಕುಳಿತು ಈಗ ಕಲಿತಿರುವ ಹೋಮ ಮಂತ್ರದ ಜೊತೆಗೆ "ವ್ಯಾಹೃತಿ" ಹೋಮವನ್ನೂ ರೂಢಿಸಿಕೊಳ್ಳುವುದು ತುಂಬಾ ಫಲಕಾರಿ. ಹೀಗೆ ಹೋಮ ಮಂತ್ರಗಳನ್ನು ಸ್ವಲ್ಪ ಸ್ವಲ್ಪ ವಿಸ್ತರಿಸಿಕೊಳ್ಳುತ್ತಾ ಹೋಗಬೇಕು.

ವ್ಯಾಹೃತಿ ಹೋಮ – ಏನು ಹೇಗೆ ?

ಯಾವ ಹೊತ್ತಿನಲ್ಲಾದರೂ ಸರಿಯೇ ಆಚರಿಸಬಹುದು. ಆದರೆ ಸೂರ್ಯಾಸ್ತ–ಸೂರ್ಯೋದಯ ಕಾಲದಲ್ಲಿ ಈ 'ವ್ಯಾಹೃತಿ ಹೋಮ' ಮಾಡಬಾರದು.

ಒಬ್ಬ ವ್ಯಕ್ತಿಯೇ ಈ ಹೋಮವನ್ನು ಮಾಡಬಹುದು ಅಥವಾ ಇಡೀ ಕುಟುಂಬದವರೆಲ್ಲಾ ಸೇರಿ ಒಟ್ಟಾಗಿ ಅಥವಾ ಕೃಷಿ ಕಾರ್ಮಿಕರೆಲ್ಲಾ ಸಾಮೂಹಿಕವಾಗಿಯಾಗಲೀ, ಸರದಿಯ ಮೇಲಾಗಲೀ ಇಷ್ಟವಾದ ಸೂಕ್ತ ಸ್ಥಳದಲ್ಲಿ ಆಚರಿಸಬಹುದು. 'ಇಷ್ಟು ಸಮಯ' ಎಂಬುದನ್ನು ಮೊದಲೇ ನಿರ್ಧರಿಸಿಕೊಂಡು ಆ ಸಮಯದವರೆಗೂ ಶ್ರದ್ಧೆಯಿಂದ ಜಿತೇಂದ್ರಿಯರಾಗಿ ಕುಳಿತು ಆಚರಿಸಬೇಕು.

ಅಗ್ನಿ ಶಾಂತವಾಗುವವರೆಗೂ 'ಧ್ಯಾನ' ಮಗ್ನರಾಗಿರುವುದು ಅಥವಾ ಮೌನವಾಗಿ ತದೇಕ ಚಿತ್ತದಿಂದ ಕುಳಿತುಕೊಂಡಿರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಪದೇ ಪದೇ ಎದ್ದು ಹೋಗುತ್ತಿರುವುದಾಗಲೀ, ಬೇರೆ ವಿಷಯಗಳ ಮಾತಾಗಲೀ ಕೂಡದು. ಮೌನವೇ ಆಭರಣ.

'ವ್ಯಾಹೃತಿ ಹೋಮ'ದ ಮಂತ್ರ ವಿವರ :

ಇದರಲ್ಲಿ ಒಟ್ಟು ನಾಲ್ಕು ಸಾಲಿನ ಮಂತ್ರಗಳಿವೆ.

1) **ಭೂ ಸ್ವಾಹಾ, 'ಅಗ್ನಯೆ' ಇದಂ ನ ಮಮ**
2) **ಭುವ ಸ್ವಾಹಾ, 'ವಾಯವ' ಇದಂ ನ ಮಮ**
3) **ಸ್ವಃ ಸ್ವಾಹಾ, 'ಸೂರ್ಯಾಯ' ಇದಂ ನ ಮಮ**
4) **ಭೂರ್ಭುವಸ್ಸ್ವಃ ಸ್ವಾಹಾ, 'ಪ್ರಜಾಪತಯ' ಇದಂ ನ ಮಮ.**

'ಮಾದರಿಯಾಗಿರುವ ಶ್ರೀ ಶ್ರೀ ಬಿಂದುಮಾಧವ ಸ್ವಾಮೀಜಿಯವರು'

CC-0. Kshetrajna Sahitya Digitized by eGangotri
ಬೆಲಗೂರಿನ 'ಕೃಷಿಋಷಿ' ಪ್ರಶಸ್ತಿ ಪುರಸ್ಕೃತ ಶ್ರೀ ಮಾಧವ' ಶರ್ಮರು ಈಗಾಗಲೇ ಈ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ ! ಮಾದರಿಯಾಗಿದ್ದಾರೆ ! ತಮ್ಮ ಕೃಷಿ ಕಾರ್ಮಿಕರಿಗೆ ಹಾಗೂ ತಮ್ಮಲ್ಲಿಗೆ ಬರುವವರಿಗೆ ಸಾವಯವ ಗೊಬ್ಬರವನ್ನೇ ಉಪಯೋಗಿಸುವಂತೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ.

ತಮ್ಮಲ್ಲಿ 'ನಡೆಯುತ್ತಿರುವ ಹೋಮ ಭಸ್ಮವನ್ನೆಲ್ಲಾ' ಒಂದು ಕಡೆ ಜೋಪಾನವಾಗಿ ಶೇಖರಿಸಿಡಿಸಿರುತ್ತಾರೆ. ಅವುಗಳನ್ನು ತಮ್ಮ ಗದ್ದೆಗಳಲ್ಲಿ ಪೈರುಗಳಿಗೆ ಸಕಾಲದಲ್ಲಿ ಸಿಂಪಡಿಸುವ ವ್ಯವಸ್ಥೆ ಮಾಡುತ್ತಾರೆ. ಜೊತೆಗೆ ಸಾವಯವ ಗೊಬ್ಬರವನ್ನೇ ಉಪಯೋಗಿಸುತ್ತಾರೆ. ಸಕಾಲದಲ್ಲಿ ಪೈರುಗಳಿಗೆ ತಮ್ಮ ಬೋರುಗಳಲ್ಲಿ ಬರುವ ನೀರನ್ನು ಉಣಿಸುತ್ತಾರೆ ! ತಾವೇ ಖುದ್ದು ನಿಂತು ಪೈರುಗಳ ಪೋಷಣೆ–ಪಾಲನೆ–ಮೇಲ್ವಿಚಾರಣೆಗಳಲ್ಲಿ, ಔಪಚಾರಗಳಲ್ಲಿ ನಿರತರಾಗಿರುತ್ತಾರೆ. ಪರಿಣಾಮವಾಗಿ ಅವರ ಗದ್ದೆಯ ಬಯಲಿನ ಭತ್ತದ ನಳನಳಿಸುವ ಆ ಪೈರುಗಳನ್ನು ದರ್ಶಿಸುವುದೇ–ಸ್ಪರ್ಶಿಸುವುದೇ ಒಂದು ರೋಮಾಂಚಕ ಅನುಭವ.

ಹೋಮಭಸ್ಮದ ಮಿಶ್ರಣದ ಬೀಜೋಪಚಾರದಿಂದ ರೋಗರುಜಿನಗಳಿಲ್ಲದೆ ಪೈರುಗಳು ತಲೆ ಎತ್ತಿ ಬಂದವರನ್ನು ಸ್ವಾಗತಿಸುತ್ತವೆ ! ರೋಗ, ಕ್ರಿಮಿಕೀಟಗಳ ಬಾಧೆ ಉಂಟಾದರೆ ಮಾರುತಿಗೆ ಮಾಡಿದ ಅಭಿಷೇಕದ ತೀರ್ಥವನ್ನೆಲ್ಲಾ ಶೇಖರಿಸಿ ಪೈರಿಗೆ ಸಿಂಪಡಿಸಲು ಸೂಕ್ತ ವ್ಯವಸ್ಥೆ ಮಾಡುತ್ತಾರೆ. ಇದರಿಂದ ಆಶ್ಚರ್ಯದ ಬೆಳವಣಿಗೆ ಕಂಡಿದ್ದಾರೆ !

ತಮ್ಮ ಜಮೀನಿನ ಮಧ್ಯದಲ್ಲಿರುವ ಆಶ್ರಯಧಾಮದಲ್ಲೇ 'ಸಾಂಗೋಪಾಂಗವಾಗಿ' ಹೋಮ ಮಾಡಿಸುತ್ತಿದ್ದಾರೆ. ಪರಿಣಾಮವಾಗಿ ನೆಟ್ಟ ಸಸಿ, ಹಾಕಿದ ಬೀಜಗಳು ಸಕಾಲದಲ್ಲಿ ಮೊಳಕೆಯೊಡೆದು ರೋಗರುಜಿನಗಳಿಲ್ಲದೇ ಪೈರುಗಳು ನಗುನಗುತ್ತಾ ಓಲಾಡುವುದನ್ನು ನೋಡುವುದೇ ಒಂದು ರಮ್ಯ ದೃಶ್ಯ. ಪಶು–ಪಕ್ಷಿಗಳೂ ಇಲ್ಲಿ ನಲಿಯುತ್ತವೆ. ಕಲೆಯುತ್ತವೆ. ತಾವು ಬೆಳೆದ ಕಾಳುಗಳ ಬಣ್ಣದಲ್ಲಿನ, ತೂಕದಲ್ಲಿನ, ರುಚಿಯಲ್ಲಿನ ಸೂಕ್ಷ್ಮ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ತಾವು ಬೆಳೆದಿರುವ 'ಅಕ್ಕಿ'ಯ ಪೌಷ್ಟಿಕಾಂಶಗಳನ್ನೂ, ಕೃಷಿಯಲ್ಲಿ ತಾವು ಕಂಡುಕೊಂಡಿರುವ, ಅನುಸರಿಸುವ ಪದ್ಧತಿಯನ್ನೂ ಬಂದ ಭಕ್ತರಿಗೆಲ್ಲಾ ಹೇಳುವುದಿರಲಿ, ಮಾರ್ಗದರ್ಶನ ನೀಡುವುದಿರಲಿ, ಎಷ್ಟೇ ಹೊತ್ತಿನಲ್ಲಿ ಯಾರೇ ಬರಲಿ, ಎಷ್ಟೇ ಭಕ್ತರು ಬಂದಿರಲಿ 'ಅಶನವಿಲ್ಲದೆ ವ್ಯಸನದಿಂದ', ಕ್ಷದ್ಬಾಧೆಯಿಂದ, ಭಗವಂತನ ಪ್ರಸಾದ ಸ್ವೀಕರಿಸದೇ ಅವರುಗಳಾರೂ ಹಿಂತಿರುಗುವಂತಿಲ್ಲ, ಕದಲುವಂತಿಲ್ಲ.

Sri Vidyabharathi Book Centre, Sringeri

ಶ್ರೀಕ್ಷೇತ್ರದಲ್ಲಿನ ದಾಸೋಹ ಈ ದಿವ್ಯ ಕ್ಷೇತ್ರದ ಆಂತರಿಕ ಗುಟ್ಟು ಇರುವುದೇ ಈ ಸುವ್ಯವಸ್ಥೆಯಲ್ಲಿ. 'ಸ್ವಾಮೀಜಿ'ಯವರ ಸ್ವಾಂತನದಲ್ಲಿ. ಮೋಹಕ ಆ ವದನದಲ್ಲಿ, ಅಭಯ ಹಸ್ತದಲ್ಲಿ, ಸ್ಪರ್ಶನದಲ್ಲಿ, ದರ್ಶನದಲ್ಲಿ, ಮಾತಿನ ಆ ಚುಂಬಕ ಮೋಡಿಯಲ್ಲಿ, ಒಲವಿನ ಆ ನಲಿವಿನಲ್ಲಿ ! 'ವೀರಪ್ರತಾಪನ' ಆ ದಿವ್ಯ ದರ್ಶನದಲ್ಲಿ. ಬಂದ ಭಕ್ತರು ತಮ್ಮ ಬವಣೆಯನ್ನೆಲ್ಲಾ ಮರೆತು, ಹೊಸ ಸಂದೇಶದೊಂದಿಗೆ, ಪರಿಹಾರದೊಂದಿಗೆ, ಉಪಚಾರದೊಂದಿಗೆ ತುಂಬು ಹೃದಯದಿಂದ ಹಿಂತಿರುಗುತ್ತಾರೆ ! ಧನ್ಯತೆಯಿಂದ ಮೊರೆಯಿಡುತ್ತಾರೆ.

'ಸಿಂಧು' ಸೃಷ್ಟಿಯ ಮೂಲ 'ಬಿಂದು'ವಿನಿಂದಲೇ !

ಈ ಶ್ರೀ ಕ್ಷೇತ್ರಕ್ಕೆ ನೀವೂ ಒಂದು ಬಾರಿ ಹೋಗಿ ಬನ್ನಿರಿ, ವೀರಪ್ರತಾಪ ಆಂಜನೇಯನ ದಿವ್ಯದರ್ಶನ ನಿಮಗೂ ದೊರೆಯಲಿ, ಹೋಮದ ಆ ಮಹಾ ಜ್ವಾಲೆಯಲ್ಲಿ ತಾಯಿ 'ಜ್ವಾಲಮಾಲಿನಿ'ಯನ್ನೇ ಕಂಡುಕೊಂಡ 'ಶ್ರೀ ಮಾಧವರ' ದರ್ಶನ ನಿಮಗೂ ಲಭ್ಯವಾಗಲಿ ! ಅದರೊಂದಿಗೇ ಪ್ರಾತ್ಯಕ್ಷಿಕವಾಗಿ ಬೆಳೆದ ಬೆಳೆಗಳ ಹೋಮ ಹಾಗೂ ಅದರ ಫಲಗಳನ್ನು ನೇರವಾಗಿ ಖಚಿತಪಡಿಸಿಕೊಳ್ಳಬಹುದಾಗಿದೆ.

ಇದೇ ರೀತಿ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ 'ತಲ್ವಾಡೆ' ಎಂಬ ಹಳ್ಳಿ 'ಯಜ್ಞನಗರ'ವೆಂದೇ ಖ್ಯಾತಿಯಾಗಿದೆ ! 'ಶ್ರೀ ವಸಂತರಾವ್ ಪರಾಂಜಪೆ'ಯವರ ಮಾರ್ಗದರ್ಶನದಲ್ಲಿ ನಿರಂತರವಾಗಿ 'ಅಗ್ನಿಹೋತ್ರ ಪದ್ಧತಿ' ಜಾರಿಯಲ್ಲಿದೆ. ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲೂ ಈ ಪದ್ಧತಿ ಈಗಾಗಲೇ ಪ್ರಾರಂಭಿಸಿರುವುದು ಒಂದು ಶುಭ ಸೂಚನೆಯೇ ಸರಿ.

ವೈಜ್ಞಾನಿಕ ಸಂಶೋಧನೆಯಿಂದ ಹೊರಬಂದಿರುವ ತಾಜಾ ಫಲಿತಾಂಶ ಇವು.

1) ಒಂದು ಗ್ರಾಂ ಸಾಮಾನ್ಯ ಭಸ್ಮದಲ್ಲಿ 0.68 ಗ್ರಾಂ 'ಫಾಸ್ಫೇಟ್' ದೊರೆತರೆ, ಅಗ್ನಿಹೋತ್ರದ ಒಂದು ಗ್ರಾಂ ಭಸ್ಮದಲ್ಲಿ 1.78 ಫಾಸ್ಫೇಟ್ ದೊರೆಯುತ್ತದೆ !

2) ಒಂದು ಗ್ರಾಂ ಸಾಮಾನ್ಯ ಭಸ್ಮವನ್ನು ಮಣ್ಣಿನಲ್ಲಿ ಬೆರೆಸಿದಾಗ 2.3 ಮಿಲಿ ಗ್ರಾಂ, 'ಫಾಸ್ಫೇಟ್' ದೊರೆತರೆ, ಅಗ್ನಿಹೋತ್ರದ ಭಸ್ಮವನ್ನು ಮಣ್ಣಿನಲ್ಲಿ ಬೆರೆಸಿದಾಗ 11.5 ಮಿಲಿ ಗ್ರಾಂ ಫಾಸ್ಫೇಟ್ ದೊರೆಯುತ್ತದೆ !

3) ಮಂತ್ರ ಉಚ್ಚರಿಸದೇ 'ಅಗ್ನಿ' ಉರಿಯುವಂತೆ ಮಾಡಿದಾಗ ಯಾವ ಬದಲಾವಣೆಗಳೂ ಕಾಣಲಿಲ್ಲ, ಬ್ಯಾಕ್ಟೀರಿಯಾದ ಮೇಲೆ ಯಾವ ಪರಿಣಾಮವೂ ಬೀರಲೇ ಇಲ್ಲ, ಬರೀ ಹೊಗೆ !

Sri Vidyabharathi Book Centre, Sringeri

CC-0. In Public Domain. Digitized by eGangotri

ಸ್ಪಷ್ಟ ಮಂತ್ರ ಉಚ್ಚಾರದೊಂದಿಗೆ ಅಗ್ನಿಯನ್ನು ಸ್ಥಾಪಿಸಿ, ಅಗ್ನಿಹೋತ್ರ ಕ್ರಮದಲ್ಲಿ ಉರಿಸಿದಾಗ 91.4ರಷ್ಟು 'ಬ್ಯಾಕ್ಟೀರಿಯಾ' ನಾಶವಾಗಿರುವುದು ಕಂಡುಬಂದಿದೆ. ಆ ಧೂಮದಲ್ಲಿ ಔಷಧಿಯ ಗುಣವಿರುತ್ತದೆ !

4) ಹೀಗೆಯೇ ಸಾಮಾನ್ಯ ತುಪ್ಪ ಮತ್ತು ಪರಿಶುದ್ಧ ತುಪ್ಪವನ್ನೂ ಪರೀಕ್ಷಿಸಿದಾಗ ಹಸುವಿನ ತುಪ್ಪದಲ್ಲಿ ಹೆಚ್ಚು ಪರಿಣಾಮವನ್ನೂ, ಉಪಯುಕ್ತ ಬದಲವಣೆಯನ್ನೂ ಆಶ್ಚರ್ಯಕರ ರೀತಿಯಲ್ಲಿ ಕಂಡುಕೊಳ್ಳಲಾಗಿದೆ. 10 ಗ್ರಾಂ ಹಸಿವಿನ ತುಪ್ಪ ಅಗ್ನಿ ಸ್ಪರ್ಶದಿಂದ 10 ಟನ್ನಿನಷ್ಟು ಆಮ್ಲಜನಕ ಉತ್ಪತ್ತಿ ಸಾಧ್ಯವೆನ್ನುವುದು ವೈಜ್ಞಾನಿಕ ಸಮೀಕ್ಷೆ.

5) ಅದೇ ರೀತಿ ಪಾಲೀಶ್ ಮಾಡದ ಅಕ್ಕಿ–ಕೆಂಪು ಅಕ್ಕಿ, ಪರಿಕರಣಗಳಲ್ಲಿ ಉಳಿದ ಪಾತ್ರೆಗಳಿಗಿಂತ ತಾಮ್ರದ ಪಾತ್ರೆಗಳ ಉಪಯೋಗಗಳಲ್ಲಿ ಹೆಚ್ಚು ಉಪಯುಕ್ತತೆಯನ್ನೂ, ರೋಗನಿರೋಧಕ ಶಕ್ತಿಯನ್ನೂ ಕಂಡುಕೊಳ್ಳಲಾಗಿದೆ.

6) 'ಶ್ರೋತೃ'ಗಳು ಘ್ರಾಣಿಸುವ ಸಾಮಾನ್ಯ ಧೂಮದಲ್ಲಿ ಮತ್ತು ಮಂತ್ರೋಚ್ಚಾರಣೆಯಿಂದ ನಡೆಸಿದ ಹೋಮಧೂಮದಲ್ಲಿ ಆಶ್ಚರ್ಯಕರವಾದ ಫಲಿತಾಂಶಗಳನ್ನು ದಾಖಲಿಸಲಾಗಿದೆ. 'ಹೋಮದ ಧೂಮ' ಮನಸ್ಸಿನ ಮೇಲೆ, ಆರೋಗ್ಯದ ಮೇಲೆ, ನರಗಳ ಮೇಲೆ ಹೆಚ್ಚು ಧನಾತ್ಮಕ ಪರಿಣಾಮ ಬೀರಿದೆ.

7) ಹಸುವಿನ ಹಾಲಿಗೆ 'ಅಣುವಿಕರಣ' ತಡೆಗಟ್ಟುವ ಶಕ್ತಿಯಿದೆ. ಹೃದ್‌ರೋಗವನ್ನೂ ತಡೆಯುವ ಶಕ್ತಿ ಇದೆ.

8) ಗೋಮೂತ್ರ : ಬಹು ಉಪಯುಕ್ತವಾದುದು. ಶಾಂಪು–ದಂತಮಾರ್ಜನಾ–ಸಾಬೂನು–ಕೀಟನಿಯಂತ್ರಕ ಔಷಧಿಗಳು–ಧೂಪ–ಎರೆಗೊಬ್ಬರ–ಊದುಬತ್ತಿ–ಆಯುರ್ವೇದದ ಹಲವು ಔಷಧಿಗಳಿಗೂ ಉಪಯೋಗವಾಗುತ್ತಿದೆ.

'ಹೋಮಚೂರ್ಣ'ದ ಔಷಧಿಗಳು :

'ಹೋಮಚೂರ್ಣ'ವನ್ನು ಮೂಲವಾಗಿಟ್ಟುಕೊಂಡು ಅನೇಕ ಔಷಧಿಗಳು ಈಗಾಗಲೇ ಬಳಕೆಗೆ, ಬೆಳಕಿಗೆ ಬಂದಿವೆ !

ಚಿಲಿ, ಪೋಲೆಂಡ್, ಜರ್ಮನಿ, ಹಾಲೆಂಡ್ ಮುಂತಾದ ಅನೇಕ ದೇಶಗಳಲ್ಲಿನ ವಿಜ್ಞಾನಿಗಳು ಮತ್ತು ವಿಜ್ಞಾನ ಪರಿಷತ್ತು ಈ ದಿಶೆಯಲ್ಲಿ ಸಂಶೋಧನೆ ಮಾಡಿ 'ಹೋಮಭಸ್ಮ'ದ ಔಷಧಿಗಳ ಗುಣವನ್ನು ವಿವಿಧ ರೀತಿಯಲ್ಲಿ ಪರೀಕ್ಷಿಸಿದ್ದಾರೆ. ರೋಗಗಳನ್ನು ತಡೆಗಟ್ಟುವುದರಲ್ಲಿ ಹೆಚ್ಚು ಧನಾತ್ಮಕ ಗುಣಗಳನ್ನು ಈಗಾಗಲೇ ಕಂಡುಕೊಂಡಿದ್ದಾರೆ ಮತ್ತು ಇವುಗಳನ್ನು ಬಳಸಲು ಶಿಫಾರಸು ಕೂಡ ಮಾಡಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಮ 'ಚೂರ್ಣ' ಅಥವಾ 'ಕ್ಯಾಪ್ಸಲ್'ಗಳು :

ನೀರು ಅಥವಾ ಜೇನುತುಪ್ಪದೊಂದಿಗೆ ಹೋಮಚೂರ್ಣವನ್ನು ದಿನಕ್ಕೆ ಮೂರು ಬಾರಿ ಅರ್ಧ ಚಮಚದಂತೆ ಸೇವಿಸಿದರೆ ಅಥವಾ ದಿನಕ್ಕೆ ಎರಡು 'ಕ್ಯಾಪ್ಸಲ್'ಗಳನ್ನು ಸೇವಿಸಿದರೆ ಜ್ವರವು ಕೂಡಲೇ ಶಮನವಾಗುವುದು. ಆರೋಗ್ಯ ಸುಧಾರಿಸುವುದು.

ಚೂರ್ಣದ ಮುಲಾಮುಗಳು :

ಚೂರ್ಣಕ್ಕೆ ಹಸುವಿನ ಶುದ್ಧ ತುಪ್ಪವನ್ನು ಬೆರೆಸಿ ಸುಟ್ಟಗಾಯಗಳಿಗೆ, ಬಿರಿದಿರುವ ಚರ್ಮದ ಹೊರಭಾಗಗಳಿಗೆ ಲೇಪಿಸಿದರೆ ಗುಣವಾಗುವುದು.

'ಅಗ್ನಿಹೋತ್ರಮ್ ಗೃಹಕ್ಷೇತ್ರಮ್,
ಅಗ್ನಿಹೋತ್ರಮ್ ಸಮಾಜಕ್ಷೇತ್ರಮ್'.

ಅಗ್ನಿಹೋತ್ರವಿರುವ ಮನೆ ಮತ್ತು ಅಂತಹ ಸಮಾಜ ಒಂದು 'ಪುಣ್ಯಕ್ಷೇತ್ರ'ವೇ ಸರಿ, ಪವಿತ್ರ ಕ್ಷೇತ್ರವೇ ಸರಿ. ದಾನ, ಧರ್ಮ, ಹೋಮ, ಜಪತಪಾದಿ ಕ್ರಿಯೆಗಳು ಪಾಪದ ಪರಿಣಾಮವನ್ನೂ ಕಡಿಮೆ ಮಾಡುತ್ತವೆ ! ಸಂಪತ್ತನ್ನೂ ವೃದ್ಧಿಸುತ್ತವೆ.

ಈ ಹೋಮ–ಯಜ್ಞ–ಯಾಗಾದಿಗಳು ಸ್ವಾರ್ಥ ರಹಿತವಾದಂತಹವು. ಆತ್ಮ ಕಲ್ಯಾಣಕ್ಕಾಗಿ, ಲೋಕಕಲ್ಯಾಣಕ್ಕಾಗಿಯೇ ಮಾಡುವಂತಹವು, ಮೂಡಿಬಂದಂತಹವು.

ಭಾರತ ಕರ್ಮ ಭೂಮಿ. ಧರ್ಮ, ಸಂಸ್ಕೃತಿಯನ್ನು ಎತ್ತಿ ಹಿಡಿಯುವ ರಾಷ್ಟ್ರ. ವಿಶ್ವದಲ್ಲಿನ ಸುಮಾರು 50 ನಾಗರೀಕತೆಗಳಲ್ಲಿ ಬಹುತೇಕ ಎಲ್ಲವೂ ಈಗ ಅಂತ್ಯಗೊಂಡಿವೆ, ಅವಸಾನ ಹೊಂದಿವೆ. ಆದರೆ ಭಾರತದ ಭವ್ಯ ನಾಗರೀಕತೆ ಮಾತ್ರ ಇನ್ನೂ ಜೀವಂತವಾಗಿ ಉಳಿದಿದೆ. ಏಕೆಂದರೆ ಇದು ನವನವೋನ್ಮೇಷ ಶಾಲಿನಿ, ಸತ್ಯ ಧರ್ಮ ನೀತಿಯ ಅಡಿಪಾಯದ ಮೇಲೆ ನಿಂತಿದೆ.

ಭಗವದ್ಗೀತೆಯು ಹೀಗೆ ತಿಳಿಸಿಕೊಟ್ಟಿದೆ.

'ತೇ ತಂಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇಪುಣ್ಯೇಮರ್ತ್ಯ ಲೋಕಂವಿಶಂತಿ ।
ಏವಂ ತ್ರಯೀಧರ್ಮಮನುಪ್ರಪನ್ನಾ–ಗತಾಗತಂ
ಕಾಮಕಾಮಾಭವಂತೇ ॥' [ಭ.ಗೀ. 9/21]

'ಯಜ್ಞಗಳನ್ನು ಮಾಡಿದವನು ಸ್ವರ್ಗಲೋಕದಲ್ಲಿ ಸುಖವನ್ನು ಅನುಭವಿಸಿ ಪುಣ್ಯವು ಮುಗಿದಾಗ ಮತ್ತೆ ಈ ಮರ್ತ್ಯಲೋಕಕ್ಕೆ ಬರುತ್ತಾರೆ'. ಹೀಗೆ ವೇದೋಕ್ತ-ಯಾಗಾದಿ ಧರ್ಮ ಕಾರ್ಯಗಳನ್ನು ಮಾಡುವವರು ತಮ್ಮ ಇಚ್ಛಾಪೂರ್ತಿಯನ್ನು ಅಪೇಕ್ಷಿಸುವುದರಿಂದ ಸಂಸಾರದಲ್ಲಿ ಬಂದು ಹೋಗುವ ಸ್ಥಿತಿಯನ್ನು ಪಡೆಯುತ್ತಾರೆ. ಅಂದರೆ ಪುಣ್ಯದ ಪ್ರಭಾವದಿಂದ ಸ್ವರ್ಗಕ್ಕೆ ಹೋಗುತ್ತಾರೆ. ಪುಣ್ಯ ಕ್ಷೀಣಿಸಿದ ನಂತರ ಮರ್ತ್ಯಲೋಕಕ್ಕೇ ಬರುತ್ತಾರೆ. ಇದು ಹೋಮಕ್ಕಿರುವ ಶ್ರೇಷ್ಠತೆ, ನಮ್ಮ ಧರ್ಮ ವೇದದಿಂದ ಪ್ರತಿಪಾದಿತವಾದ ಧರ್ಮ. ನಾವು ಸದಾ ಕರ್ಮದ ಫಲವನ್ನೇ ಅನುಭವಿಸುತ್ತೇವೆ. ನೀತಿಯ ನೆಲೆ ಈಗ ಅನಿವಾರ್ಯ, ಅತ್ಯಗತ್ಯ.

ಒಳ್ಳೆಯ ಕೆಲಸ ಪ್ರಾರಂಭಿಸಲು ನಿಧಾನ ಕೂಡದು. ನಾಳೆ ಮಾಡೋಣ, ಬೇರೆಯವರಿಂದ ಮಾಡಿಸೋಣ, ಎನ್ನುವುದಕ್ಕಿಂತಲೂ ಇಂದೇ ನಮ್ಮಿಂದಲೇ ಮೊದಲು ಪ್ರಾರಂಭವಾಗಲಿ. 'ಆಲಸ್ಯಂ ಅಮೃತಂ ವಿಷಂ'!

ನಾವು, ನೀವು ಒಗ್ಗೂಡಿ ಪ್ರಾರಂಭಿಸೋಣ ಹೋಮ ಪದ್ಧತಿಯ ಬೇಸಾಯವನ್ನು ! 'ಪ್ರಾರಂಭವಾಗಲಿ ಕೃಷಿ ಸಂಪತ್ತಿಗಾಗಿ ಅಗ್ನಿಹೋತ್ರ'.

ಸರ್ವೇ ಜನಾಃ ಸುಖಿನೋ ಭವಂತು
ಸಮಸ್ತ ಸನ್ಮಂಗಳಾನಿ ಭವಂತಿ ॥
ಓಂ ಶಾಂತಿಃ ಶಾಂತಿಃ ಶಾಂತಿಃ

~~~~~~~~~~~~~~~~

Sri Vidyabharathi Book Centre, Sringeri
~~~~~~~~~~~~~~~~

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri